ಬೆಂಕಿಯಾದದ್ದು!!
ನನ್ನ ಬಾಳಿನ ಬೆಳಕಿಗೊ?
ಜ್ವಾಲೆಯಾಗಿ ಸುಡಲೋ?

ಜಲವಾದದ್ದು!!
ನನ್ನ ದಣಿವ ನೀಗಿಸಲೋ?
ನೀರಲ್ಲೇ ನಿನ್ನ ಮುಳುಗಿಸಲೋ?

ಅನಿಲವಾದದ್ದು!!
ನನ್ನ ಉಸಿರ ಸೇರಲೋ?
ಕೊನೆ ಉಸಿರಿಗೆ ಧ್ವನಿಯಾಗಲೋ?

ಬಣ್ಣವಾದದ್ದು!!
ಬದುಕ ಚೈತ್ರ ತೋರಲೋ?
ಬಾಳ ಸಂತಸ ಕಪ್ಪಾಗಿಸಲೋ?

ಭೂಮಿಯಾದದ್ದು!!
ನನ್ನ ಹೊತ್ತು ಪೋಷಿಸಲೋ?
ಕಂಪಿಸಿ ನನ್ನ ನುಂಗಲೆಂದೋ?

ಬದುಕಿಗೆ ಬಂಡಿ ಆದದ್ದು!!
ಮೌನದ ಸಂತಸದ ಹಬ್ಬಕ್ಕೋ?
ಗುರಿ ತೋರಿಸದೆ ಮಸಣಕ್ಕೋ...

**ಮಂಜನಗೌಡ .ಎನ್.ಎಸ್**
5ನೇ ಸೆಮಿಸ್ಟರ್ ಎಲ್ಎಲ್.ಬಿ

ಪ್ರಥಮ ಸಂಚಿಕೆ
ನವೆಂಬರ್ 2023

# ಬೆಳ್ನುಡಿ



ಭಾರತದ ಆತ್ಮನಿರ್ಭರತೆಯ ಪ್ರತೀಕ–ಭಾರತ ಮಂಟಪ!

ಭರತ–ಭಾರತಕ್ಕೆ ಆದರ್ಶ


ಕಾವೇರಿ–ಕನ್ನಡ–ಹೋರಾಟ

ಇನ್ನಾದರೂ ಮಹಿಳೆ ಮಹನೀಯಳು ಎನ್ನೋಣ

ಕೃತಕ ಬುದ್ಧಿಮತ್ತೆಯ ನ್ಯಾಯಾಧೀಶರುಗಳು!

ಮನದ ಗುಡಿಯ ಬೆಳಗುವೊಂದು ನುಡಿಯೇ ಬೆಳ್ನುಡಿ!





**ಮಂಜನಗೌಡ .ಎನ್.ಎಸ್**
5ನೇ ಸೆಮಿಸ್ಟರ್ ಎಲ್‌ಎಲ್.ಬಿ





# ಬೆಳ್ನುಡಿ


ಉಪನ್ಯಾಸಕ ಸಂಪಾದಕರು
**ಅಸ್ಮತ್ತುನೀಸಾ ಜಿ**

ಸಂಪಾದಕ
**ತೇಜಸ್ ಎಚ್ ಬಾಡಾಲ**

ಉಪ ಸಂಪಾದಕ
**ಸಂಪತ್ ಕುಮಾರ್ ಜೋಶಿ**

ಉಪ ಸಂಪಾದಕಿ
**ಕೃತಿ ಕೈಲಾರ್**


ಗೌರವ ಸಂಪಾದಕ
**ರೋಹನ್ ವಿ ಗಂಗಡ್ಕರ್**

ಸಂಪಾದಕೀಯ ಮಂಡಳಿ
**ಬಸಂತ್ ಡಿ**
**ಆರ್ ಎಸ್ ಶಶಾಂಕ್**
**ರಕ್ಷಿತಾ ಎಂ**

ಪುಟ ವಿನ್ಯಾಸ
**ಆರ್. ರುದ್ರೇಶ್**


ವಿ.ಸೂ: ಬೆಳ್ನುಡಿಯಲ್ಲಿ ಪ್ರಕಟವಾಗುವ ಬರಹಗಳು ಲೇಖಕರ ಅಭಿಪ್ರಾಯವೇ ಹೊರತು ಪತ್ರಿಕೆ ಅಥವಾ ಸಂಸ್ಥೆಯದ್ದಲ್ಲ.

–ಸಂಪಾದಕ








ಮುಖ್ಯ ಸಂಪಾದಕರು
**ಪ್ರೊ. ಕೆ. ಎಸ್. ಸುರೇಶ್**


ವ್ಯವಸ್ಥಾಪಕ ಸಂಪಾದಕರು
**ಡಾ. ಎಸ್. ನಟರಾಜು**


## ಪರಿವಿಡಿ


| | |
|---|---|
| ಸಂಪಾದಕೀಯ...... | 3 |
| ಭಾರತದ ಆತ್ಮನಿರ್ಭರತೆಯ ಪ್ರತೀಕ ? ಭಾರತ ಮಂಟಪ! | 4 |
| ಭರತ–ಭಾರತಕ್ಕೆ ಆದರ್ಶ | 6 |
| ಕಾವೇರಿ–ಕನ್ನಡ–ಹೋರಾಟ | 7 |
| ಇನ್ನಾದರೂ ಮಹಿಳೆ ಮಹನೀಯಳು ಎನ್ನೋಣ! | 9 |
| ಕೃತಕ ಬುದ್ಧಿಮತ್ತೆಯ ನ್ಯಾಯಾಧೀಶರುಗಳು! | 10 |
| ಕೆಲವು ಕವನಗಳು | 14 |
| ಕೆಲವು ಚಿತ್ರಗಳು | 16 |

# ಸಂಪಾದಕೀಯ

✍ ತೇಜಸ್ ಎಚ್ ಬಾಡಾಲ
5ನೇ ಸೆಮಿಸ್ಟರ್ ಬಿ.ಎ.ಎಲ್.ಎಲ್.ಬಿ



ಮನುಜನ ಸಹಜ ಪ್ರವೃತ್ತಿಯೇ ಅಭಿವ್ಯಕ್ತಿ. ಅವನು ಅಂತರ್ಮುಖಿಯಾದರೂ ಸರಿಯೇ; ಅವನ ಭಾವನೆಗಳನ್ನು ಹೊರಹಾಕಲು ಕೆಲುವೊಮ್ಮೆ ಅಳುತ್ತಾನೆ, ನಗುತ್ತಾನೆ, ಅರಚುತ್ತಾನೆ, ಎಲ್ಲವೂ ಇದ್ದಿದ್ದೇ. ಸಮಾಜದಲ್ಲಿ ಬದುಕುವ ಮನುಷ್ಯನು ಅಭಿವ್ಯಕ್ತಿ ಇಲ್ಲದೆ ಹೇಗೆ ಬದುಕಿಯಾನು? ಪಶ್ಚಿಮದಿಂದ ಬಂದ ಹೊಸ ಹೊಸ ಪದ್ಧತಿಗಳಲ್ಲಿ ಮಾನಸಿಕ ಅಸ್ವಸ್ಥತೆಯೂ ಒಂದು. ಅವರ ಪ್ರಭಾವ ಮುಂಚೆಯೇ ಇರಲಿಲ್ಲವೆಂದೇನಲ್ಲ. ಭಾರತೀಯರು, ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ಹಲವಾರು ಮಾರ್ಗಗಳನ್ನು ಎಂದೋ ಕಂಡುಕೊಂಡಿದ್ದರು. ಮನವು ಮರ್ಕಟವೆಂದು ಅವರು ಹೇಳಿದ್ದು ಅದರ ಚಂಚಲ ಸ್ವಭಾವಕ್ಕೆಂದಲ್ಲ. ಅದರ ಶಕ್ತಿಗೆ. ಆ ಮನದ ಶಕ್ತಿಯು ಕೋತಿಯಂತೆಯೇ ಸದಾ ಜಿನುಗುವಂಥದ್ದು; ಅದೇ ಶಕ್ತಿಯನ್ನು ಕೇಂದ್ರೀಕರಿಸಿ ಒಂದೇ ಕಾರ್ಯದಲ್ಲಿ ವ್ಯಯಿಸಿದಾಗ ಸಿಗುವ ಫಲವು ಅಪ್ರತಿಮ. ಆ ಮನದ ಮರ್ಕಟವನ್ನು ಸದಾ ಕಾರ್ಯಪ್ರವೃತ್ತವಾಗಿರಿಸಲು ಭಾರತೀಯರು ಕಂಡುಕೊಂಡ ಹಲವಾರು ಶ್ರೇಷ್ಠ ವಿದ್ಯೆಗಳಲ್ಲಿ ಪ್ರಮುಖವಾದವುಗಳು ಸಂಗೀತ, ನಾಟ್ಯ, ಅಧ್ಯಯನ, ಇತ್ಯಾದಿ. ಅರವತ್ತು ನಾಲ್ಕು ಕಲೆಗಳಿವೆ; ಒಂದಕ್ಕಿಂತ ಒಂದು ಅದ್ಭುತವಾದವುಗಳು; ಎಲ್ಲದರ ಕೊನೆಯ ಉದ್ದೇಶವೇ ಜ್ಞಾನೋದಯ. ಇದರಿಂದ ದೊರಕುವ ಎಲ್ಲಾ ಪ್ರತಿಫಲಗಳೂ ಜ್ಞಾನವಸ್ತುವೇ. ನಮಗೆ ಜ್ಞಾನಕ್ಕೂ ಮಾಹಿತಿಗೂ ಇರುವ ವ್ಯತ್ಯಾಸ ತಿಳಿದಿರಬೇಕು. ಇದರ ಸಮರ್ಥನೆಗೆ ಮತ್ತೇ ನಮ್ಮ ಭಾರತೀಯರ ಮಹತ್ತರವಾದ ಆತ್ಮಜ್ಞಾನದ ಕಿಂಚಿತ್ ಅರಿವು ಬೇಕು. ಇದಕ್ಕಾಗಿ ಮತ್ತೆ ಆಸ್ತಿಕ್ಯ–ನಾಸ್ತಿಕ್ಯದ ವಾದ ವಿವಾದಗಳು ಎಲ್ಲವೂ ಇದ್ದಿದ್ದೇ. ಆದರೆ ಜ್ಞಾನ ಎನ್ನುವುದು ಮಾಹಿತಿಯಿಂದ ಬೇರೆ ಹೇಗಾಗುತ್ತದೆ? ಮಾಹಿತಿ ಕೇವಲ ಲೌಕಿಕದ ಅರಿವಿಗಾಗಿ ಅಷ್ಟೆ. ಆದರೆ ಜ್ಞಾನ ಎನ್ನುವುದು ಸಾಕ್ಷಾತ್ಕಾರವನ್ನು ಮೂಡಿಸುವ ಬೆಳಕು. ಈ ಬೆಳಕನ್ನು ಕಂಡುಕೊಂಡವರು ಜೀವನ್ಮುಕ್ತರಾಗುವರು. ಎಲ್ಲಾ ಲೌಕಿಕ ಜಂಜಡಗಳು ಅವರಿಗೆ ಶುಷ್ಕವೆಂದೆನ್ನಿಸಿ ಜೀವನವನ್ನು ಸುಲಭವಾಗಿ ಸಾಗಿಸಿಬಿಡುತ್ತಾರೆ. ಆಗ ಅವರಿಗೆ ಆರಂಭವಾಗುವ ಹಂಬಲವೇ ಜ್ಞಾನದ ಪಸರಿಸುವಿಕೆ. ಜ್ಞಾನವು ಹಂಚಿದಷ್ಟೂ ಹೆಚ್ಚಾಗುವಂಥದ್ದು. ಈ ಹಂಚಿಕೆ ಎನ್ನುವ ಕ್ರಿಯೆಯೂ ಅಭಿವ್ಯಕ್ತಿಯೇ. ಅಂತರ್ಮುಖರಾದಾಗ ಬಹುಶಃ ಬೇರೆ ದೃಷ್ಟಿಕೋನಗಳು ನಮ್ಮೊಳಗೇ ತೆರೆದುಕೊಳ್ಳುತ್ತವೆ. ಅವುಗಳ ಮೂಲಕ ಕಾಣುವ ಬೇರೆ ಬೇರೆ ನೋಟಗಳು ನಮ್ಮೊಳಗಿನ ಕಲ್ಮಶಗಳನ್ನು ಹೋಗಲಾಡಿಸುವಂಥವು. ಈ ಭಾವನೆಯು ಧರ್ಮಾತೀತ. ಇದು ಮನುಜನ ಮಾನಸಿಕತೆಯ ವೈಜ್ಞಾನಿಕ ದೃಷ್ಟಿ. ಇದನ್ನು ಅರ್ಥ ಮಾಡಿಕೊಂಡವರಲ್ಲಿ ಮೊದಲಿಗರೇ ಭಾರತೀಯರು. ಅಂತರ್ಮುಖರಾಗಿ ಮೌನದಲ್ಲೇ ಅವರನ್ನವರು ಅರ್ಥ ಮಾಡಿಕೊಂಡವರು ನಂತರ ಮುಂದಾಗುವುದು ಅಭಿವ್ಯಕ್ತಿಗೇ.

ಈಗೀಗ್ಗೆ ಎಲ್ಲರೂ ಅಭಿವ್ಯಕ್ತಿ ಸ್ವಾತಂತ್ರ್ಯ ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಇದರಿಂದ ನಮಗರಿವಾಗಬೇಕಾದದ್ದು ಯಾವುದೋ ಸರ್ಕಾರದ ಕೈವಾಡ, ಪತ್ರಕರ್ತ ಸ್ವಾತಂತ್ರ್ಯ, ಇವುಗಳಲ್ಲ. ಅಭಿವ್ಯಕ್ತಿಯ ಪಾತ್ರ ಎಷ್ಟು ಮಹತ್ವಪೂರ್ಣವಾದದ್ದು! ಆಂತರ್ಯದಲ್ಲಿ ಯಾವುದೇ ಸತ್ವವಿಲ್ಲದಿದ್ದರೂ ಅಭಿವ್ಯಕ್ತಿಯು ಗಟ್ಟಿಯಾಗಿದ್ದರೆ ಜನರ ಮನವನ್ನು ಗೆದ್ದುಬಿಡುವುದು ಬಹು ಸುಲಭ. ಆದರೆ ಅಂತಹವರನ್ನು ಎಷ್ಟು ಬೇಗ ಜನರು ನಂಬುವರೋ ಅಷ್ಟೇ ಬೇಗ ಪೊಳ್ಳುತನವನ್ನು ಅರ್ಥಮಾಡಿಕೊಂಡು ಇನ್ನೊಂದು ಮೂಲವನ್ನು ಹುಡುಕಿಕೊಂಡು ಹೋಗುವುದೇ ಸತ್ಯ. ಆದ್ದರಿಂದ ಮೊದಲು ಸತ್ವವಿರಬೇಕು. ನಂತರವಷ್ಟೇ ಅದರ ಪ್ರತಿಪಾದನೆ. ಆದರೆ ನಡುನಡುವೇ ಆಗುವ ಚಿಕ್ಕ ಚಿಕ್ಕ ಅಭಿವ್ಯಕ್ತಿಗಳು ನಮ್ಮ ದಾರಿಯನ್ನು ಗುರುತಿಸಿಕೊಳ್ಳುವ ಪರಿ.

ಅಭಿವ್ಯಕ್ತಿಯು ಮನದ ಭಾರವನ್ನು ತಗ್ಗಿಸುತ್ತವೆ. ಅಭಿವ್ಯಕ್ತಿಯೇ ಮನುಜರ ನಡುವಿನ ಸಂಬಂಧಗಳನ್ನು ಗಟ್ಟಿಗೊಳಿಸುವ ಯಂತ್ರ. ಅಭಿವ್ಯಕ್ತಿಯೇ ಮುಂದೆ ಇತಿಹಾಸವಾಗುವ ವಿಷಯ. ಆದ್ದರಿಂದ ಒಳಗಿರುವ ವಿಷಯ ಅಭಿವ್ಯಕ್ತವಾದರಷ್ಟೇ ಅದಕ್ಕೂ ಬೆಲೆ, ಸಾರ್ಥಕತೆ.

ಅಜ್ಞಾನಂ ತಿಮಿರಾಂಧಸ್ಯ ಎಂದು ನಮ್ಮ ಪೂರ್ವಜರು ಹೇಳಿದ್ದಾರೆ. ಅಲ್ಲಿಗೆ ಅಜ್ಞಾನವು ನಮ್ಮ ಶಕ್ತಿಯನ್ನು ಮುಚ್ಚಿಬಿಡುವ ಕತ್ತಲೆ. ಅದನ್ನು ಹೋಗಲಾಡಿಸುವ ಏಕಮಾತ್ರ ಸಾಧನವೇ ಜ್ಞಾನ. ಇದು ಗುರುವಿನಲ್ಲಿ ನಾವಿಡುವ ಶ್ರದ್ಧೆ, ನಮ್ಮ ಶ್ರಮದ ಮೇಲೆ ನಮ್ಮ ನಂಬಿಕೆ, ಇವುಗಳಿಂದ ದೊರೆಯುತ್ತದೆ. ಇವೆಲ್ಲವೂ ತತ್ವವೇ ಆಯಿತು. ಜ್ಞಾನವು ಇನ್ನೊಬ್ಬರ ನುಡಿಯಿಂದಲೂ ದೊರಕುತ್ತದೆ. ಪಾರ್ಥನಿಗೆ ಸಾರಥಿಯಾಗಿ ಶ್ರೀಕೃಷ್ಣನು ನುಡಿದ ನುಡಿಗಳೆ ಇಂದು ಬೆಳಕಾಗಿಲ್ಲವೇ? ದೇಹಕ್ಕೆ ಹೇಗೆ ಪ್ರಾಣವೂ, ಚೈತನ್ಯವೋ, ಹಾಗೆ ನಮ್ಮ ಈ ಪತ್ರಿಕೆಗೆ ನಿಮ್ಮ ನುಡಿಗಳೂ, ಅಭಿವ್ಯಕ್ತಿಯೂ! ಆದ್ದರಿಂದಲೇ ಈ ಹೆಸರು, “ಬೆಳ್ನುಡಿ”. ಬೆಳಗುವ ನುಡಿ. ಗುಡಿಯೆಂದರೆ ಅದೊಂದು ಶಕ್ತಿಸ್ಥಳ. ನಮ್ಮ ಮನವೂ ಒಂದು ಗುಡಿಯಲ್ಲವೆ? ಅದ್ಭುತ ಶಕ್ತಿವುಳ್ಳ ಈ ಮನವು ನಮ್ಮ ಆಲೋಚನೆ ಭಾವಲಹರಿಗಳಿಂದ ತನ್ನ ಅಸ್ತಿತ್ವವನ್ನು ಬೆಳೆಸಿಕೊಳ್ಳುತ್ತದೆ. ಆ ಮನವೆಂಬ ಗುಡಿಯನ್ನು ಬೆಳಗುವ ನುಡಿಗಳು ಈ ಬೆಳ್ನುಡಿಯು ಒಳಗೊಳ್ಳಲಿ.

ಈ ಪ್ರಯತ್ನಕ್ಕೆ ಅಡಿಗಲ್ಲು ಹಾಕಿದ ನಮ್ಮ ಉಪನ್ಯಾಸಕಿ ಅಸ್ಮತ್ತುನೀಸಾ ಮೇಡಮ್ ಅವರಿಗೂ, ಬೆನ್ನುತಟ್ಟಿ ಶುಭಸೂಚಿಸಿದ ನಮ್ಮ ಮುಖ್ಯ ಕಾರ್ಯನಿರ್ವಾಹಕರಾದ ಸುರೇಶ್ ಸರ್ ಅವರಿಗೂ, ಜೊತೆಗಿದ್ದು ಮುಖ್ಯ ಸಲಹೆಗಳನ್ನಿತ್ತ ಪ್ರಾಂಶುಪಾಲರಾದ ನಟರಾಜು ಸರ್ ಅವರಿಗೂ, ಈ ಬೆಳ್ನುಡಿಯ ಜೀವಾಳವೂ, ಶರೀರವೂ, ಸಮಸ್ತವೂ ಆಗಿರುವ ಸಂಪಾದಕೀಯ ಮಂಡಳಿಯ ಸಂಪತ್ ಜೋಶಿ, ಕೃತಿ ಕೈಲಾರ್, ರೋಹನ್ ಗಂಗಡ್ಕರ್, ಬಸಂತ್, ಶಶಾಂಕ್ ಹಾಗು ರಕ್ಷಿತಾ, ಇವರೆಲ್ಲರೂ ಈ ಪತ್ರಿಕೆಯ ರೂವಾರಿಗಳು. ಇವರಿಗೆ ಅತ್ಯಂತ ಹೃನ್ಮನ ಧನ್ಯವಾದಗಳು!

ನಿಮ್ಮ ನುಡಿಗಳು ಈ ಪತ್ರಿಕೆಯನ್ನು ಬೆಳಗಲೆಂದು ಆಶಿಸುತ್ತಾ....





# ಭಾರತದ ಆತ್ಮನಿರ್ಭರತೆಯ ಪ್ರತೀಕ–ಭಾರತ ಮಂಟಪ!

✍ ಕೃತಿ ಕೈಲಾರ್
5ನೇ ಸೆಮಿಸ್ಟರ್ ಬಿ.ಬಿ.ಎ.ಎಲ್.ಎಲ್.ಬಿ



**ಉಳ್ಳವರು ಶಿವಾಲಯವ ಮಾಡುವರು**
**ನಾನೇನ ಮಾಡಲಿ? ಬಡವನಯ್ಯ ॥**
**ಎನ್ನ ಕಾಲೇ ಕಂಬವಯ್ಯ**
**ಎನ್ನ ದೇಹವೇ ದೇಗುಲವಯ್ಯ**
**ಶಿರವೇ ಹೊನ್ನ ಕಳಶವಯ್ಯ**
**ಕೂಡಲಸಂಗಮದೇವ ಕೇಳಯ್ಯ,**
**ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ॥**



ಬಸವಣ್ಣನವರ ಈ ವಚನದ ಕೊನೆಯ ಸಾಲಿನ ಒಳಾರ್ಥವೇನೆಂದರೆ, ಅಚಲವಾಗಿರುವುದು ನಶಿಸಿಹೋಗುತ್ತದೆ, ಅಳಿಯುತ್ತದೆ. ಆದರೆ ನಿರಂತರವಾಗಿ ಚಲಿಸುವ ಸೃಷ್ಟಿಯು ಅನಂತ, ಅಮರ, ಎಂದಿಗೂ ಉಳಿವಂತದ್ದು. ಉಳಿಯತಕ್ಕದ್ದು. ನಟರಾಜ, ಮಹಾದೇವ, ಶಂಕರ ಇತ್ಯಾದಿ ನಾಮಗಳುಳ್ಳ ಶಿವನ ಈ ತತ್ವದ ಅನುಯಾಯಿಯಾಗಿದ್ದ ಬಸವಣ್ಣನವರು ಸಮಾಜದ ಕಲ್ಯಾಣಕ್ಕಾಗಿ ಕಲ್ಪಿಸಿದ ವಿಶ್ವದ ಪ್ರಪ್ರಥಮ ಸಂಸತ್ತೇ ಅನುಭವ ಮಂಟಪ.

ಈ ಪರಿಚಯವು ಹಾಗೇ ಇರಲಿ.

ಇತ್ತೀಚಿಗೆ ನವದೆಹಲಿಯ ಪ್ರಗತಿ ಮೈದಾನದಲ್ಲಿ ಕಾರ್ಗಿಲ್ ವಿಜಯ ದಿವಸದಂದು, ಎಂದರೆ 26ನೇ ಜುಲೈ, 2023 ರಂದು ‘ಭಾರತ ಮಂಟಪಂ’ – ಅಂತಾರಾಷ್ಟ್ರೀಯ ಪ್ರದರ್ಶನ ಮತ್ತು ಸಮಾವೇಶ ಕೇಂದ್ರವು ಅನಾವರಣಗೊಂಡಿತು. ಇದಕ್ಕೆ ಅನುಭವ ಮಂಟಪವೇ ಸ್ಫೂರ್ತಿ ಎಂದು ಪ್ರಧಾನಿ ನರೇಂದ್ರ ಮೋದಿಯವರು ಘೋಷಿಸಿದಾಗ ಎಲ್ಲಿಲ್ಲದ ಹೆಮ್ಮೆಯಾಯಿತು. ಈ ‘ಭಾರತ ಮಂಟಪ’ವು ಹೆಸರೇ ಸೂಚಿಸುವಂತೆ ಭಾರತೀಯರಿಂದಲೇ ಭಾರತೀಯರಿಗಾಗಿ ಸೃಜಿಸಲ್ಪಟ್ಟ ಒಂದು ಅದ್ಭುತ ಕಲಾಕೃತಿ. ಭಾರತದ ಅಮೋಘ ಅಭಿವೃದ್ಧಿಯ ಚಿಹ್ನೆ ಇದಾಗಿದ್ದು, ಹೆಸರಿನಷ್ಟೇ ವಿಶಾಲವೂ ವಿಶೇಷವೂ ಆಗಿದೆ. 123 ಎಕರೆಗಳ ವ್ಯಾಪಕ ವಿಸ್ತಾರವುಳ್ಳ ಈ ಭಾರತ ಮಂಟಪದ ಮೊದಲ ಮಹಡಿಯಲ್ಲಿ ಹಲವಾರು ಸಭೆಗಳನ್ನು ನಡೆಸಬಲ್ಲ ಸುಂದರ ಕೊಠಡಿಗಳಿವೆ. ಎರಡನೇ ಹಂತದಲ್ಲಿನ ಬೃಹತ್ ಸಭಾಂಗಣದಲ್ಲೇ ಭಾರತವು ಅಧ್ಯಕ್ಷತೆ ವಹಿಸಿ ನಡೆಸಿದ G20 ಶೃಂಗಸಭೆಯು ನಡೆದಿದ್ದು, ವಿವಿಧ ದೇಶದ ನಾಯಕರು ಈ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದರಾದ್ದರಿಂದ ಈ ಬೃಹತ್ ಸಭಾಂಗಣದಲ್ಲಿ ಭಾರತದ ಸಮೃದ್ಧ ಕಲೆ, ಸಂಸ್ಕೃತಿಯ ಪ್ರತೀಕವಾದ ಹಲವು ಕಲಾಕೃತಿಗಳ ಪ್ರದರ್ಶನ ಏರ್ಪಟ್ಟಿದೆ. ಬಹಳ ವಿಶೇಷವಾಗಿ, ವಿಶ್ವಕ್ಕೆ ಭಾರತ ನೀಡಿದ ಅತ್ಯಮೂಲ್ಯ ಕೊಡುಗೆಯಾದ ಅಷ್ಟಾಂಗ ಯೋಗದ ಪ್ರಮುಖ ಭಾಗವಾದ ಆಸನಗಳ ಶಿಲೆಗಳನ್ನು ಇಲ್ಲಿ ಪ್ರದರ್ಶಿಸಿದ್ದರು. ಇವುಗಳನ್ನು ಯೋಗದ ಮುಖ್ಯ ಸಂಹಿತೆಗಳಲ್ಲಿ ಒಂದಾದ ಘೇರಾಂಡಾ ಸಂಹಿತೆಯಿಂದ ಆರಿಸಲ್ಪಟ್ಟಿತ್ತು.

ಮೂರನೇ ಹಂತದಲ್ಲಿ ಬಹುರೂಪಿ ಮಹಾ ಸಭಾಂಗಣವೊಂದಿದೆ. ಇದರ ಆಸನ ಸಾಮರ್ಥ್ಯವೇ 7000 ಮಂದಿ! ಇಲ್ಲೇ ಇರುವ ಬಯಲು ಸಭಾಂಗಣದ ಆಸನ ಸಾಮರ್ಥ್ಯ 3000 ಮಂದಿ! ಇದರಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎನ್ನಲಾಗಿದೆ.

ಕೊನೆಯ ಹಂತದಲ್ಲಿ ಭಾರತ ಮಂಟಪದಿಂದ ಸರ್ವೋಚ್ಚ ನ್ಯಾಯಾಲಯವೂ, ಇಂಡಿಯಾ ಗೇಟ್, ಹಾಗೆ ದೆಹಲಿಯ ಆ ಭಾಗದ ಸೌಂದರ್ಯವು ಕಾಣಸಿಗುತ್ತದೆ.

ಹೈದರಾಬಾದ್, ಉತ್ತರಪ್ರದೇಶ, ಕಾಶ್ಮೀರ, ಕರ್ನಾಟಕ, ತಮಿಳುನಾಡು, ಹೀಗೆ ಭಾರತದ ವಿವಿಧ ಮೂಲೆ ಮೂಲೆಗಳಿಂದಲೂ ಬಂದ ಕುಶಲಕರ್ಮಿಗಳು ಭಾರತ ಮಂಟಪದ ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ. ಆಯಾ ರಾಜ್ಯದ ಕಲೆಯು ಆ ಕಲಾಕಾರರ ಕೈಯಲ್ಲಿ ರಾರಾಜಿಸಿ, ಭಾರತ ಮಂಟಪದ ವಿನ್ಯಾಸವು ತುಂಬಾ ಅಚ್ಚುಕಟ್ಟಾಗಿದೆ. ಒಂದೊಂದೇ ಹೇಳುತ್ತಾ ಹೋದರೆ ಸರಿಯಾಗದು.



ಇಲ್ಲಿ ಓದಿ ನಂತರ ಅದನ್ನು ಕಣ್ಣಾರೆ ತುಂಬಿಕೊಂಡಾಗಲಲ್ಲವೇ ಕಲಾಕಾರರ ಶ್ರಮಕ್ಕೆ ಸಾರ್ಥಕತೆ?

‘ಮಧುಬನಿ’ ಶೈಲಿಯ ವರ್ಣಚಿತ್ರಗಳು ಅತ್ಯಾಕರ್ಷಕ! ವಿಶ್ವ ಸಂಸ್ಥೆಯಿಂದ ‘ವಿಶ್ವ ಪರಂಪರೆಯ ತಾಣ’ ಎಂಬ ಮಾನ್ಯತೆ ಪಡೆದಿರುವ ಕೊನಾರ್ಕ್ ನ ಸೂರ್ಯ ದೇವಾಲಯದ ಪ್ರಸಿದ್ಧ ಚಕ್ರದ ಪ್ರತಿಕೃತಿ ಇಲ್ಲಿದೆ. ಇದಕ್ಕೆ ತಕ್ಕಂತೆ ಸೂರ್ಯದೇವ, ತನ್ನ ರಥ ಹಾಗು ಅದನ್ನು ಮುಂದೆಳೆವ ಸಪ್ತಾಶ್ವಗಳ ಶಿಲ್ಪವಿದೆ! ☞6 ನೇ ಪುಟಕ್ಕೆ

# ಭಾರತದ ಆತ್ಮನಿರ್ಭರತೆಯ ಪ್ರತೀಕ–ಭಾರತ ಮಂಟಪ!


(5ನೇ ಪುಟದಿಂದ)

ಅವುಗಳು ಶಕ್ತಿಯನ್ನೂ, ವಿಜಯವನ್ನೂ ಸೂಚಿಸುತ್ತವೆ. ಕೇವಲ ಇಷ್ಟೇ ಅಲ್ಲ. ಪಂಚಮಹಾಭೂತಗಳಾದ 'ಆಕಾಶವಾಯು ಅಗ್ನಿಜಲಪೃಥ್ವಿ' ಎಂಬ ಕೆತ್ತನೆಯೂ ಇದೆ. ಇನ್ನು ಹೊರಾಂಗಣದಲ್ಲಿ ಶುಭಾರಂಭದ ದ್ಯೋತಕವಾದ ಶಂಖದ ಕಲಾಕೃತಿಯನ್ನೂ ನಾವು ಕಾಣಬಹುದು.

ನಾಟ್ಯಕ್ಕೆ ಸಂಬಂಧಿಸಿದಂತಹ ಎರಡು ಮುಖ್ಯ ವಿಷಯಗಳನ್ನು ನಾನಿಲ್ಲಿ ಸಂತಸದಿಂದ ಪ್ರಸ್ತಾಪಿಸಬೇಕಿದೆ. ಒಂದು, ಭಾರತದ ರಾಷ್ಟ್ರ ಪಕ್ಷಿಯಾದ ನವಿಲನ್ನೇ ಕೇಂದ್ರೀಕರಿಸಿ ಇಡೀ ಭಾರತ ಮಂಟಪದ ಗೋಡೆಗಳು, ದ್ವಾರಗಳು ಹಾಗು ನೆಲಗಳನ್ನು ಅಲಂಕರಿಸಿರುವುದು ನಯನಮನೋಹರವಾಗಿದೆ. ಎರಡನೆಯದಾಗಿ, ಸೃಷ್ಟಿ–ಸ್ಥಿತಿ–ಲಯಗಳ, ಹಾಗೆಯೇ ಶಿಷ್ಟಪರಿಪಾಲನೆ–ದುಷ್ಟಶಿಕ್ಷಣ, ತಿರೋಭಾವ, ಅನುಗ್ರಹಗಳ ಸಚ್ಚಿದಾನಂದಮೂರ್ತಿಯಾದ ನಟರಾಜನ ಬೃಹತ್ ಪ್ರತಿಮೆಯನ್ನು ಭಾರತ ಮಂಟಪದ ಎದುರೇ ಸ್ಥಾಪಿಸಿರುವುದು ಅತ್ಯಂತ ಶ್ಲಾಘನೀಯ. ಈ ವಿಗ್ರಹವು ವಿಶ್ವದಲ್ಲೇ ಅತೀ ದೊಡ್ಡದಾದಂತಹದ್ದು; ಇಪ್ಪತ್ತೇಳು ಅಡಿಗಳಷ್ಟು! ಇದನ್ನು ಅಷ್ಟಧಾತುಗಳಾದ ಚಿನ್ನ, ಬೆಳ್ಳಿ, ತಾಮ್ರ, ಕಂಚು, ಪಾದರಸ, ಸತುವು (Zinc), ಸೀಸದ ಲೋಹ (Lead), ತವರ(Tin)ಗಳಿಂದ ಚೋಳ ಶೈಲಿಯಲ್ಲಿ ತಮಿಳುನಾಡಿನ ರಾಧಾಕೃಷ್ಣ ಸ್ಥಪತಿ, ಶ್ರೀಕಂಠ ಸ್ಥಪತಿ, ಹಾಗು ಸ್ವಾಮಿನಾಥ ಸ್ಥಪತಿಯವರು ತಯಾರಿಸಿದ್ದಾರೆ. ಈ 'ಸ್ಥಪತಿ' ಎನ್ನುವ ಜನಾಂಗವು ಸಾಕ್ಷಾತ್ ವಿಶ್ವಕರ್ಮನ ವಂಶಜರು ಎಂಬುದು ಪ್ರತೀತಿ. ದಕ್ಷಿಣ ಭಾರತವಿರಲಿ, ಭಾರತದ ಎಷ್ಟೋ ದೇವಾಲಯಗಳ, ಅದರೊಳಗಿನ ಗರ್ಭಗುಡಿಯ ದಿವ್ಯ ಮೂರ್ತಿಗಳನ್ನು ಕೆತ್ತಲು ಈ ಜನಾಂಗದವರನ್ನೇ ಕರೆಯುತ್ತಾರೆ.

ಈ ನಟರಾಜಮೂರ್ತಿಯ ಸುತ್ತಲಿನ 54 ಜ್ವಾಲೆಗಳು ಪ್ರಕೃತಿಯ ನಿರಂತರ ಚಲನೆಯನ್ನು ಸೂಚಿಸುತ್ತದೆ. ಇದನ್ನೇ ಭಾರತಕ್ಕೆ ಸಮೀಕರಿಸಿದಾಗ ನಿರಂತರ ಅಭಿವೃದ್ಧಿಯನ್ನೇ





ಸೂಚಿಸುತ್ತದೆ! ಎಂತಹ ಪರಿಕಲ್ಪನೆ! ಇನ್ನು ಶಿವನ ಹರಡಿದ ಜಟಿಲ ಜಟೆಯನ್ನು ಹಿಮಾಚಲಕ್ಕೂ ದಟ್ಟ ಅರಣ್ಯಕ್ಕೂ ಹೋಲಿಸಬಹುದು. ಅವನ ಜಟೆಯು ಸಮಸ್ತ ವಾಙ್ಮಯವನ್ನೇ ಸೂಚಿಸುತ್ತದೆ! ಅವನ ಶಿರದ ಮೇಲಿನ ಗಂಗೆಯು ಶಾಶ್ವತತೆಯ ಪ್ರತೀಕವಾದರೆ, ಅರ್ಧಚಂದ್ರವು ಸೌಂದರ್ಯವನ್ನು ಬಿಂಬಿಸುತ್ತದೆ. ಬಲಗೈಯಲ್ಲಿನ ಡಮರು ಸೃಷ್ಟಿಯ ಆರಂಭದ ದ್ಯೋತಕ. ಈ ಡಮರುವಿನಿಂದ ಉಂಟಾದ ನಾದವೇ ಪ್ರಪ್ರಥಮವಾದ 'ವಾಕ್'.

ಇದರಿಂದಲೇ ಭಾಷೆಯೂ, ಅರ್ಥವೂ ಉಂಟಾಯಿತು. ಇದರ ಒಂದು ಅರ್ಥವು ಇದಾದರೆ, ಆ ಡಮರುವು ವಿಶ್ವಗುರು ಭಾರತವು ವಿಶ್ವದಲ್ಲೇ ತೆಗೆದುಕೊಂಡ ಎಷ್ಟೋ 'ಮೊದಲ ಹೆಜ್ಜೆ' ಎಂಬುದನ್ನು ಸೂಚಿಸುತ್ತದೆ. ಕಮಲದ ಪೀಠದ ಮೇಲಿರುವ ಅಜ್ಞಾನದ ಚಿಹ್ನೆಯಾದ ಅಪಸ್ಮಾರನನ್ನು ಮೆಟ್ಟಿನಿಂತು ಆನಂದ ತಾಂಡವವಾಡುತ್ತಿರುವ ನಟರಾಜನು ಬೇರೆಯಲ್ಲ, ತಾಯಿ ಭಾರತಿಯು ಬೇರೆಯಲ್ಲ. ಅಪಸ್ಮಾರನಂತೆಯೇ ಸಮಾಜದಲ್ಲಿ ಉದ್ಭವವಾಗುತ್ತಿರುವ ಅಜ್ಞಾನದ ಕಿಡಿಗಳನ್ನು ಅಲ್ಲೆಯೇ ತುಳಿದು ಆನಂದವೇ ಮೈವೆತ್ತ ಮೂರ್ತಿಯಂತಿರುವ ಭಾರತಾಂಬೆಯ ಪ್ರಜ್ಞೆಯಂತೆಯೇ ಜಾಗೃತರಾಗಿ ಮಹತ್ತರವಾದ ಜ್ಞಾನದೆಡೆಗೆ ಸಾಗಬೇಕು. ಭಾರತದ ಸರ್ವತೋಮುಖ ಪ್ರಗತಿಗೆ ಕಾರಣರೂ, ಸಾಕ್ಷಿಯೂ ಆಗಬೇಕು.

ಒಟ್ಟಾಗಿ ಹೇಳುವುದಾದರೆ ಈ ಭಾರತ ಮಂಟಪವು ಭಾರತದ ಆತ್ಮನಿರ್ಭರತೆಯ ಪ್ರತೀಕ, ಆಧುನಿಕತೆ ಹಾಗು ಸಾಂಸ್ಕೃತಿಕತೆಯು ಬೆರೆತ ಭಾರತದ ಶಕ್ತಿ!

ಬಸವಣ್ಣನವರ ಅನುಭವ ಮಂಟಪದಂತೆಯೇ ಭಾರತ ಮಂಟಪವೂ ಅಭಿವ್ಯಕ್ತಿಯ, ಪ್ರಗತಿಯ, ಜ್ಞಾನದ ಸಾಕಾರ ಮೂರ್ತಿಯಾಗಲಿ! ಸತ್ಕಾರ್ಯಗಳಿಂದ ಕುಟುಂಬ ಎನಿಸಿರುವ ಸಮಸ್ತ ವಸುಧೆಯಲ್ಲಿ ಕಲ್ಯಾಣವುಂಟಾಗಲಿ. ಇದೇ ಅಲ್ಲವೇ ಭಾರತೀಯರ ಸಂಕಲ್ಪ? ■





# ಭರತ–ಭಾರತಕ್ಕೆ ಆದರ್ಶ

ಆರ್ ಎಸ್ ಶಶಾಂಕ್
5ನೇ ಸೆಮಿಸ್ಟರ್ ಬಿ.ಬಿ.ಎ.ಎಲ್.ಎಲ್.ಬಿ



ರಾಮಾಯಣದಲ್ಲಿ ಬರುವ ಹಲವಾರು ಮಹಾಪುರುಷರು ಹಾಗು ದಾರ್ಶನಿಕರಲ್ಲಿ ಒಬ್ಬ ಭರತ. ಕೇವಲ ಶ್ರೀರಾಮಚಂದ್ರನ ತಮ್ಮ ಎನ್ನುವ ಅಸ್ತಿತ್ವವಲ್ಲದೆ, ತನ್ನ ಮಹೋನ್ನತ ಆದರ್ಶ ಹಾಗು ಸದ್ವಿಚಾರಗಳಿಂದ ಈತ ಅಂದಿಗೂ, ಇಂದಿಗೂ, ಎಂದೆಂದಿಗೂ ಚಿತ್ತಭಿತ್ತಿಯಲ್ಲಿ ಅಚ್ಚಳಿದೆ ಉಳಿಯುವ, ಭರತಖಂಡದ ಚರಿತ್ರೆಯ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದಾನೆ.

ರಾಮಾಯಣದಲ್ಲಿ ಶ್ರೀರಾಮ, ಲಕ್ಷ್ಮಣ, ಹನುಮಂತ, ಸೀತಾಮಾತೆ, ಸುಗ್ರೀವ, ರಾವಣ ಹಾಗು ಇಂದ್ರಜಿತು ಮುಂತಾದವರ ಕುರಿತಾಗಿ ಇರುವ ವಿವರ ಹಾಗು ವಿಷಯಗಳು ಈತನ ಕುರಿತಾಗಿಲ್ಲ ಎನಿಸಿದರೂ, ಈತನ ವ್ಯಕ್ತಿತ್ವ, ಉದಾತ್ತ ಚಿಂತನೆ ಹಾಗು ಸಾಮಾಜಿಕ ಮೌಲ್ಯಗಳು ನಮ್ಮನ್ನು ಆವರಿಸುವುದಲ್ಲದೆ ಆತನನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ.

ಅಷ್ಟಕ್ಕೂ ದಶರಥ ಹಾಗು ಕೈಕೇಯಿಯರ ಪುತ್ರನಾದ ಈತನನ್ನು ನಾನಿಷ್ಟು ಕೊಂಡಾಡುತ್ತಿರುವೆನೇಕೆ? ಆತ ಇಂದಿಗೂ ಪ್ರಸ್ತುತನೇಕೆ? ಇವೆಲ್ಲಕ್ಕೂ ಕೆಲವು ಕಾರಣಗಳಿವೆ.



ಭರತನನ್ನು ಅಯೋಧ್ಯೆಯ ಅರಸನನ್ನಾಗಿಸುವ ಹುನ್ನಾರದಿಂದ ಕೈಕೇಯಿ 'ಶ್ರೀರಾಮನು ಹದಿನಾಲ್ಕು ವರ್ಷಗಳು ವನವಾಸಕ್ಕೆ ಹೋಗಬೇಕು' ಎಂಬ ವರವನ್ನು ದಶರಥನ ಬಳಿ ಬೇಡಿದಳು. ಪಿತೃವಾಕ್ಯಪರಿಪಾಲನೆಗಾಗಿ ಶ್ರೀರಾಮನೂ ಹೊರಟೇ ಬಿಡುವನು. ಇದು ಭರತನಿಗೆ ಮೊದಲು ತಿಳಿದಿರುವುದೇ ಇಲ್ಲ. ದಾಶರಥಿಯು ಸೌಮಿತ್ರಿ ಹಾಗು ಜಾನಕಿಯೊಂದಿಗೆ ವನವಾಸಕ್ಕೆ ಹೊರಟು, ದಶರಥನು ಪರಲೋಕಕ್ಕೆ ಹೊರಟಾಗಷ್ಟೇ ಮುನಿ ವಸಿಷ್ಠರು ಭರತನನ್ನು ಅಜ್ಜನ ಮನೆಯಿಂದ ಕರೆತರಲು ಧೂತರನ್ನು ಕಳುಹಿಸುತ್ತಾರೆ. ಅಧ್ಯಯನದಲ್ಲಿ ನಿರತನಾಗಿದ್ದ ಭರತನು ಆ ಸಾಕೇತಪುರಿ ಎನಿಸಿದ ಅಯೋಧ್ಯೆಗೆ ಮರಳಿದಾಗ ಸ್ಮಶಾನಸದೃಶ ಮೌನದಲ್ಲೇ ಬರಸಿಡಿಲಿನಂತೆ ಅಪ್ಪಳಿಸಿದ್ದು ತನ್ನ ತಂದೆಯ ಮರಣವಾರ್ತೆ ಹಾಗೆಯೇ ತನ್ನ ಜ್ಯೇಷ್ಠನ ನಿರ್ಗಮನ. ಅಣ್ಣನನ್ನು ತಂದೆಯಷ್ಟೇ ಪ್ರೀತಿ ಗೌರವಗಳಿಂ ಕಾಣುತ್ತಿದ್ದ ಆತ ದಿಕ್ಕೆಟ್ಟು ಚಿಂತಾಕ್ರಾಂತನಾಗಿ ತಾಯಿಯ ಬಗ್ಗೆ ತೀವ್ರ ಕೋಪ ತಾಳುತ್ತಾನೆ.

ವಾಸ್ತವದಲ್ಲಿ ಕೈಕೇಯಿ ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಿದ ಉದ್ದೇಶವೇ ಭರತನನ್ನು ಸಮಸ್ತ ಅಯೋಧ್ಯೆಯ ಸಾರ್ವಭೌಮ, ಚಕ್ರವರ್ತಿಯನ್ನಾಗಿಸಬೇಕೆಂದು. ಆದರೆ ಭರತ ಇದನ್ನು ಸ್ಪಷ್ಟವಾಗಿ ತಿರಸ್ಕರಿಸಿಬಿಡುತ್ತಾನೆ.

ಇವತ್ತಿಗೆ ತುಂಡು ಭೂಮಿಗಾಗಿ, ಆಸ್ತಿಯ ವಿಭಜನೆಗಾಗಿ, ಕುಟುಂಬದ ಆಸ್ತಿಪಾಲಿಗಾಗಿ ತಮ್ಮತಮ್ಮಲ್ಲೇ ಬಡಿದಾಡುವ, ಹೊಡೆದಾಡುವ, ಕೌರವ–ಪಾಂಡವರಂತೆ ವರ್ತಿಸುವ ಹಾಗು ಕೆಲುವೊಮ್ಮೆ ಕುಟುಂಬದವರನ್ನೇ, ಹತ್ತಿರದವರನ್ನೇ ಹತ್ಯೆ ಮಾಡಿಬಿಡುವ, ವ್ಯಾಜ್ಯದ ಮೇಲೆ ವ್ಯಾಜ್ಯ ಹೂಡಿ ಜಗಳಕ್ಕೇ ಕಾಲ್ಕೆರೆಯುವ ಜನರ ನಡುವೆಯೇ ಸಮಸ್ತ ಅಯೋಧ್ಯೆಯ ಸಿಂಹಾಸನ ತನಗಾಗಿ ಕಾಯುತ್ತಿದ್ದರೂ ಸೂರ್ಯವಂಶ ಚಕ್ರೇಶ್ವರನಾಗಿ ಸಮಸ್ತ ಭೂಮಂಡಲದ ಐಶ್ವರ್ಯ, ಸುಖ, ಭೋಗ, ಇವೆಲ್ಲವೂ ತನ್ನೆದುರಲ್ಲೇ ನಿಂತು ಆಹ್ವಾನಿಸುತ್ತಿದ್ದರೂ, ಎಲ್ಲವನ್ನೂ ನೇರ ವಾಗಿ ತಿರಸ್ಕರಿಸಿ, ಇಲ್ಲ!, ತನ್ನ ಅಣ್ಣನೇ ಇವೆಲ್ಲವನ್ನೂ ಪಡೆಯಲರ್ಹ ಎಂದು ಸಕಲವನ್ನೂ ತೃಣಸಮಾನ ಎಂದು ನೋಡುವ ಮಹಾ ಪುರುಷ ಭರತನಿಂದ ನಾವೆಲ್ಲ ಕಲಿಯಬೇಕಾದ್ದು ಸಾಕಷ್ಟಿದೆ!

[illegible] ಪ್ರಮುಖರನ್ನೆಲ್ಲಾ ಒಟ್ಟುಗೂಡಿಸಿ ಆತ ನೇರವಾಗಿ ಶ್ರೀರಾಮಚಂದ್ರ ಇದ್ದ ವನವನ್ನು ಪ್ರವೇಶಿಸಿ ಅಯೋಧ್ಯೆಗೆ ಬರುವಂತೆ, ಸಿಂಹಾಸನವನ್ನು ಅಲಂಕರಿಸುವಂತೆ ಬೇಡಿಕೊಳ್ಳುತ್ತಾನೆ. ಅಣ್ಣನ ಕಾಲಿಗೆ ಬಿದ್ದು ತನ್ನ ತಾಯಿಯಿಂದಾದ ಕಾರ್ಯಕ್ಕೆ ಕ್ಷಮೆ ಬೇಡುತ್ತಾನೆ. ಆದರೆ ಪಿತೃವಾಕ್ಯಪರಿಪಾಲಕನಲ್ಲವೇ ಶ್ರೀರಾಮ? ಅವನು ಒಪ್ಪುವುದಿಲ್ಲ. ಭರತನೇನು ಬಿಡುವನೇ? 'ನಿನ್ನ ಪಾಲಿನದಾದ, ನಿನಗೇ ಸೇರಬೇಕಾದ ಆ ಸಿಂಹಾಸನದ ಮೇಲೆ ನಾನು ಕೂರು ವುದು ಹೇಗೆ? ಇದಾಗದು!' ಎಂದು ಪಟ್ಟು ಹಿಡಿಯುತ್ತಾನೆ.

ಕೊನೆಗೆ ಭರತನ ಹಟಕ್ಕೆ ಮಣಿದ ಶ್ರೀರಾಮ, ತನ್ನ ಪಾದುಕೆಗಳನ್ನು ಭರತನ ಕೋರಿಕೆಯಂತೆಯೇ ಕೊಟ್ಟು, ಆತನನ್ನು ಬೀಳ್ಕೊಡುತ್ತಾನೆ. ಭರತನು ಯಾವ ರಾಜವೈಭೋಗಗಳ ಸದ್ದಿಲ್ಲದೆ ಶ್ರೀರಾಮನ ದಿವ್ಯಪಾದುಕೆಗಳನ್ನು ತಲೆಯ ಮೇಲೆ ಹೊತ್ತು ಅಯೋಧ್ಯೆಗೆ ಮರಳಿ ಬಂದು ಶ್ರೀರಾಮನ ವನವಾಸ ಮುಗಿವವರೆಗೂ ಆತನ ಪ್ರತಿನಿಧಿಯಾಗಿ, ಆತನ ಪಾದುಕೆಗಳನ್ನೇ ಸಿಂಹಾಸನದ ಮೇಲಿಟ್ಟು ಅಯೋಧ್ಯೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಾನೆ.

ಒಟ್ಟಿನಲ್ಲಿ ಸನಾತನ ಧರ್ಮದಲ್ಲಿ ತೋರಲ್ಪಟ್ಟಿರುವ ಭ್ರಾತೃಪ್ರೇಮದ ಹಾಗು ಸಹೋದರತ್ವದ ಸಾಕಾರಮೂರ್ತಿಯಾಗಿ ನಿಲ್ಲುವ ಈತ ನಿಸ್ವಾರ್ಥತೆಯ ಪ್ರತೀಕವಾಗಿ ನಮ್ಮೆಲ್ಲರಿಗೂ ಆದರ್ಶರೂಪಿಯಾಗಿದ್ದಾನೆ. ■

# ಕಾವೇರಿ–ಕನ್ನಡ–ಹೋರಾಟ

ಬಸಂತ್ ಡಿ
3ನೇ ಸೆಮಿಸ್ಟರ್ ಬಿ.ಎ.ಎಲ್.ಎಲ್.ಬಿ



ನದಿಗಳು ನಾಗರೀಕತೆಯ ತೊಟ್ಟಿಲುಗಳು ಎಂದು ಇತಿಹಾಸಕಾರರು ಹೇಳುತ್ತಾರೆ. ಮೆಸಪಟೋಮಿಯಯಿಂದ ಹಿಡಿದು ಸಿಂಧೂ ನಾಗರೀಕತೆಯವರೆಗೂ ಅವುಗಳ ಹುಟ್ಟು ಹಾಗೂ ಜೀವಿತವಧಿಯವರೆಗೂ ಊರುಗೋಲಾಗಿದ್ದು ನದಿಗಳೇ.

ಜೀವಿಯ ಬದುಕಿಗೆ, ಬೆಳೆಗೆ, ವ್ಯಾಪಾರ–ವಹಿವಾಟಿಗೆ ಎಲ್ಲದಕ್ಕೂ ನೀರು ಅತ್ಯವಶ್ಯಕ. ಅಂತೆಯೇ ಕನ್ನಡ ನಾಡಿಗೂ ಕಾವೇರಿ ಜೀವಸೆಲೆ; ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ ತಮಿಳುನಾಡು–ಪಾಂಡಿಚೆರಿ ಮುಖಾಂತರ ಹರಿದು ಬಂಗಾಳ ಕೊಳ್ಳಿ ಸೇರುತ್ತದೆ. ಇನ್ನು ಕನ್ನಡದ ಮೊದಲ ಕೃತಿಯಾದ ಕವಿರಾಜಮಾರ್ಗದಲ್ಲೇ ನಾಡಿನ ಭೌಗೋಳಿಕತೆಯನ್ನು ಹೀಗೆ ಕವಿ ದಾಖಲಿಸಿದ್ದಾನೆ:

**“ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್**
**ಭಾವಿಸಿದ ಜನಪದಂ ವಸುಧಾ ವಲಯ ವಿಲೀನ ವಿಶದ ವಿಷಯ ವಿಶೇಷಂ**
**ಅದರೊಳಗಂ ಕಿಸುವೊಳಲಾ ವಿದಿತ ಮಹಾ ಕೋಪಣ ನಗರದಾ ಪುಲಿಗೆರೆಯಾ**
**ಸಧಭಿಮಸ್ತುತಮತ್ತೊಂಕುಂದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್”**

ಇದೆಲ್ಲ ಕಾವೇರಿಯ ಇತಿಹಾಸವಾದರೆ ಅದರ ಪ್ರಸ್ತುತತೆ ಈಗ ಸ್ವಲ್ಪ ಬಿಗಡಾಯಿಸಿದೆ, ಸ್ವಲ್ಪವೇನು ರೈತರ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆಯೇ. ಭಾರತ ಒಕ್ಕೂಟದಲ್ಲಿ ಹಳೆಯ ಅಂತರ–ರಾಜ್ಯ ನೀರಿನ ಸಮಸ್ಯೆ ಇದ್ದರೆ ಅದು ಕಾವೇರಿಯದ್ದೇ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇದರ ಸಮಸ್ಯೆಗಳೆಲ್ಲವನ್ನು ಆಲಿಸಿ, ಇದಕ್ಕೆ ಎಂದೆ ಕಾವೇರಿ ನೀರು ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿದೆ. ಇದು ಬಹಳಷ್ಟು ಬಾರಿ ಸಮಸ್ಯೆ ಬಂದಾಗಲೆಲ್ಲ ಉಪಶಮನ ಮಾಡಿ ಕಳುಹಿಸಿದೆ, ನಮಗೆ ಅನ್ಯಾಯವಾದರು ಕೆಲವೊಮ್ಮೆ ಅಣ್ಣ–ತಮ್ಮಂದಿರೆಂಬ ಭಾವನೆಯಲ್ಲಿ ಸುಮ್ಮನಾಗಿದ್ದೇವೆ. ಭಾರತದಲ್ಲಿ ಕನ್ನಡಿಗರಿಗೊಂದು ಹಣೆಪಟ್ಟಿ ಕೊಟ್ಟಿದ್ದಾರೆ; ಅಥವಾ ನಮ್ಮ ಹಿರಿಯರ ಉದಾರಭಾವವೋ ಕಾಣೆ..ಈಗ ನಮಗೆ ಬೇಡವಾದ ಹಣೆಪಟ್ಟಿಯನ್ನ ಅನ್ಯರಾಜ್ಯದವರು, ಅನ್ಯಭಾಷಿಕರು ಕಟ್ಟುತಿದ್ದಾರೆ–ಕನ್ನಡಿಗರು ಬಹಳ ಶಾಂತಿಪ್ರಿಯರು, ತಾಳ್ಮೆ ಉಳ್ಳವರು ಎಲ್ಲರನ್ನೂ ಪ್ರೀತಿಯಿಂದ ಬರಮಾಡಿಕೊಳ್ಳುವವರು ಎಂದು. ಇದು ಈಗ ತೀರಾ ಬೇಡವಾದ ಸ್ಥಿತಿಗೆ ಬಂದು ತಲುಪಿದೆ. ಯಾಕೆಂದರೆ, ಬರಿ ಕಾವೇರಿಯ ವಿಷಯವಾಗಿ ಅಲ್ಲ ಹಿಂದಿ ಹೇರಿಕೆ ವಿಷಯವಾಗಿರಬಹುದು, ಒಕ್ಕೂಟ ವ್ಯವಸ್ಥೆಯಲ್ಲಿ ನಮ್ಮನ್ನ ಕಡೆಗಣನೆ ಮಾಡುವುದು, ಜಿ ಎಸ್ ಟಿ ಯಲ್ಲಿ ನಮ್ಮ ಪಾಲು ಕೊಡದಿರುವುದು, ಇದೆಲ್ಲವನ್ನು ಅರಗಿಸಿಕೊಂಡು ಬೆಂಗಳೂರು ಇನ್ನೂ ಬತ್ತದ ಕಡಲಾಗಿ ಉಳಿದಿದೆ, ಅದಕ್ಕೆ ಕಾರಣ ಕನ್ನಡದ ಬಗ್ಗೆ ಅಭಿಮಾನ ಇರುವ ಕನ್ನಡಿಗರು ಮಾತ್ರ.

ಇನ್ನು ಕಾವೇರಿಯ ವಿಷಯಕ್ಕೆ ಬರುವುದಾದರೆ, ಇಲ್ಲಿ ನಮಗೆ ಕುಡಿಯಲು ನೀರಿಲ್ಲ; ರಾಜ್ಯದ ರೈತರು ಬರಗಾಲ ಬಂದು ತತ್ತರಿಸುತ್ತಿದ್ದಾರೆ, ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ; ಇವೆಲ್ಲದರ ನಡುವೆಯೂ ತಮಿಳುನಾಡಿಗೆ ತಮ್ಮ ಪಾಲಿನ ಪಾಲು ಮಾತ್ರ ಬೇಕು. ಇದೆಷ್ಟು ಏಕಾಭಿಮುಖವಾಗಿದೆ ಎಂದರೆ ಕನ್ನಡದವರು ಏನು ಮಾಡಿದರು ಸುಮ್ಮನಿರುತ್ತಾರೆ ಎಂಬ ತಾತ್ಸಾರ ಭಾವವು ಅಥವಾ ಮಾತನಾಡಲು ಗಟ್ಟಿ ನಾಯಕರಿಲ್ಲ ಎನ್ನುವುದಕ್ಕೂ ಮೇಲಿಂದ ಮೇಲೆ ಹೊಡೆತ ತಿನ್ನುತ್ತಿರುವವರು ನಾವೇ. ಇದೆಲ್ಲವಕ್ಕೂ ಮೀರಿ ಮುಖ್ಯಮಂತ್ರಿಗಳಾಗಿದ್ದ ಎಸ್.ಬಂಗಾರಪ್ಪನವರು ಸುಗ್ರೀವಾಜ್ಞೆ ಹೊರಡಿಸಿ ಒಂದು ಹನಿ ನೀರು ಬಿಡದೆ ದಿಟ್ಟತನ ಮೆರೆದಿದ್ದರು. ಇಂದು ಅಂತಹ ನಾಯಕತ್ವ ಯಾರಿಗೂ ಇಲ್ಲ. ಈ ಮಧ್ಯದಲ್ಲಿ ವಿಷಯ ಕಾವೇರಿದಾಗ ಹೋರಾಟಗಳನ್ನು ಮಾಡುತ್ತಾರೆ, ರಾಜ್ಯವನ್ನು ಬಂದ್ ಮಾಡುತ್ತಾರೆ, ಒಂದೆರಡು ಮುಖಗಳು ಮುನ್ನೆಲೆಗೆ ಬಂದು ಮಾಧ್ಯಮದಲ್ಲೋ ಪತ್ರಿಕೆಗಳಿಗೋ ಹೇಳಿಕೆ ನೀಡುತ್ತಾರೆ ಅಷ್ಟೇ, ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಬಂದ್ ಆದಾಗ ಮತ್ತದೆ ಕಾರ್ಮಿಕ ವರ್ಗ, ದುಡಿಯೋ ವರ್ಗ ದಿನಗೂಲಿಯನ್ನು ಬಿಟ್ಟು ಮನೆಯಲ್ಲಿ ಕೂತು ಕೊಳ್ಳಬೇಕು, ಶಾಲಾ–ಕಾಲೇಜು ವಿದ್ಯಾರ್ಥಿಗಳಾದ ನಾವು ರಜಾ ಸಿಕ್ಕಿತಲ್ಲ ಎನ್ನುವ ಭಾವನೆಯಲ್ಲಿ ಇನ್ನೂ ಒಂದು ಗಂಟೆ ಹೊತ್ತಾಗಿ ಎದ್ದು, ದಿನ ಕಳೆದು ಮತ್ತೆ ನಮ್ಮದೇ ಕಾರ್ಯ ಚಟುವಟಿಕೆಯ ಭಾಗವಾಗುತ್ತೇವೆ. “ಹೊತ್ತಿಗೆ ಮಾಡಿದ ಅಡಿಗೆ ಹೊಟ್ಟಿ ತುಂಬಿದ ಮ್ಯಾಲೆ ಮುಗಿತು” ಅನ್ನೋ ಹಾಗೇ ಹೋರಾಟವಾಗಲಿ, ಆಕ್ರೋಶವಾಗಲಿ ಮುಂದುವರೆಯುವುದಿಲ್ಲ, ಕಡೆಗೆ ಹತಾಶೆಯೇ ನಮಗೆ ಉತ್ತರ ಎಂದು ತೆಪ್ಪಗಾಗುತ್ತೇವೆ.

ತೇಜಸ್ವಿಯವರು ಈ ಕುರಿತಂತೆ ತಮ್ಮ ಕೃತಿಯೊಂದರಲ್ಲಿ ಈ ರೀತಿಯಾಗಿ ಉಲ್ಲೇಖಿಸಿದ್ದಾರೆ: “ಯಾವುದೇ ಭೂಭಾಗಕ್ಕೆ ಅದರದ್ದೇ ಆದ ಅನುಕೂಲಗಳು ಮತ್ತು ಅನಾನುಕೂಲಗಳು ಇರುತ್ತವೆ. ಅಲ್ಲಿನ ನೈಸರ್ಗಿಕ ಸಂಪತ್ತಿನ ಒಡೆತನ ಮತ್ತು ಅದರ ಮೊದಲ ಬಳಕೆಯ ಹಕ್ಕು ಆಯಾ ಪ್ರದೇಶದ ಜನ ಸಮುದಾಯದ್ದಾಗಿರುತ್ತದೆ. ಭೂಮಿಯ ಮೇಲಿನ ಖನಿಜ ಸಂಪತ್ತು, ಭೂಮಿಯ ಮೇಲಿನ ಅರಣ್ಯ ಉತ್ಪನ್ನಗಳು ಹೇಗೆ ಆಯಾ ಸರ್ಕಾರದ ಆಸ್ತಿಯೋ ಹಾಗೆಯೇ ಆ ಪ್ರದೇಶದಲ್ಲಿ ಸುರಿಯುವ ಮಳೆ ಹಾಗೂ ಹರಿಯುವ ನೀರಿಗೂ ಆ





ಕಾವೇರಿ–ಕನ್ನಡ–ಹೋರಾಟ



ಪ್ರದೇಶದ ಜೀವ ವೈವಿಧ್ಯವೇ ಪ್ರಥಮ ಹಕ್ಕುದಾರ ಆಗಿರುತ್ತಾನೆ. ಹಾಗಾಗಿ ಕಾವೇರಿ ನೀರಿನ ಮೊದಲ ಹಕ್ಕು ನಿರ್ವಿವಾದವಾಗಿ ಕರ್ನಾಟಕದ್ದೇ ಆಗಿರುತ್ತದೆ. ನಮ್ಮ ಅಗತ್ಯತೆಯನ್ನು ಪೂರೈಸಿದ ನಂತರವಷ್ಟೇ ಇತರರಿಗೆ ನೆರವಾಗುವ ಪ್ರಶ್ನೆ ಉದ್ಭವಿಸುತ್ತದೆ”. ಕಾವೇರಿ ಕನ್ನಡಿಗರದ್ದೆ ಅಂತ ಬಹಳ ಸ್ಪಷ್ಟವಾಗಿ ಪ್ರತಿಪಾದಿಸಿದ್ದರು, ತಮಿಳರಿಗೆ ಇದರಲ್ಲಿ ಹಕ್ಕಿಲ್ಲ ಅಂತ ಎಲ್ಲೂ ಹೇಳಿಲ್ಲ. ಇಲ್ಲಿ ನಾವು ಹೇಳಬಯಸಿರುವ ತರ್ಕವೇನೆಂದರೆ, ನಮ್ಮ ಬಳಿ ನೂರು ರೂಪಾಯಿ ಇದ್ದಾಗ ಐವತ್ತು ಕೊಡುತ್ತೇವೆ, ನಮ್ಮ ಜೇಬಲ್ಲಿ ಎರಡು ರೂಪಾಯಿ ಇದ್ದಾಗ ಐವತ್ತು ರೂಪಾಯಿ ಎಲ್ಲಿಂದ ಕೊಡೋಣ?

ಇದರಲ್ಲಿ ಮುಂಚಿನಿಂದಲೂ ಸರ್ಕಾರಗಳ ವಿಫಲತೆ ಎದ್ದು ಕಾಣುತ್ತಿದೆ. ತೇಜಸ್ವಿಯವರು ಇದಕ್ಕೂ ಎಚ್ಚರಿಕೆ ಎಂಬಂತೆ ತಮ್ಮ ಹೊಸ ವಿಚಾರಗಳು ಪುಸ್ತಕದಲ್ಲಿ, ”ಕನ್ನಡಿಗರ ಆಶೋತ್ತರಗಳನ್ನು ಬಲವಾಗಿ ಪ್ರತಿಪಾದಿಸುವ ಪಕ್ಷ ಮತ್ತು ರಾಜಕಾರಣಿಗಳು ಕನ್ನಡ ನಾಡಿನಲ್ಲಿ ಇಲ್ಲದಿದ್ದರೆ ನಾವು ನಲ ನೀಲಿನಂತೆಯೇ ನೆಲವನ್ನೂ ಕಳೆದುಕೊಳ್ಳುತ್ತೇವೆ” ಎಂದು ಘಂಟಾಘೋಷವಾಗಿ ಹೇಳಿಬಿಟ್ಟಿದ್ದಾರೆ.

ಕಾವೇರಿ ವಿಷಯಕ್ಕಾಗಲಿ, ನಾಡಿನ ಅಸ್ಮಿತೆಯ ವಿಚಾರ ಬಂದಾಗ ಬೆಂಬಲ, ಬಲ ನೀಡಲು ಉತ್ತರ ಕರ್ನಾಟಕದ ಜನ ಸದಾ ಮುಂದು ನಿಲ್ಲುತ್ತಾರೆ. ಆದರೆ ಉತ್ತರ ಕರ್ನಾಟಕ ಹೆಚ್ಚಾಗಿ ಕಲ್ಯಾಣ ಕರ್ನಾಟಕ ಭಾಗದ ತುಂಗಭದ್ರ ಅನ್ಯಾಯಕ್ಕಾಗಲಿ, ಮಹದಾಯಿ–ಕೃಷ್ಣ ವಿಚಾರಗಳಿಗಾಗಲಿ ಅಷ್ಟಾಗಿ ಬೆಂಬಲ ದೊರೆಯುವುದಿಲ್ಲ. ನಮ್ಮ ಬಯಲು ಸೀಮೆಯ ಮಂದಿಗೆ ಕೃಷಿಗಲ್ಲ, ಕುಡಿಯಲೂ ಸರಿಯಾದ ನೀರಿಲ್ಲ, ಶಾಶ್ವತವಾದ ಬರವನ್ನ ಅನುಭವಿಸುತ್ತಿದ್ದಾರೆ, ಅದಕ್ಕೆ ಯಾರು ಬಂದ್ ಮಾಡುವುದಿಲ್ಲ, ದಕ್ಷಿಣ ಕರ್ನಾಟಕ ಮಂದಿ ಬಾಯಿ ಬಿಡುವುದಿಲ್ಲ, ಇಲ್ಲಿ ಕಾವೇರಿಗೆ ಹೇಗೆ ಉತ್ತರ ಕರ್ನಾಟಕ ಜನ ಬೆಂಬಲವಾಗಿ ನಿಲ್ತಾರೋ ಅವರ ಸಮಸ್ಯೆಗಳಿಗೂ ಕರ್ನಾಟಕ ಜೊತೆಯಾಗಿ ನಿಲ್ಲಬೇಕು, ಅದು ರಾಜಕಾರಣಿಗಳ ತಪ್ಪೋ, ಉತ್ತರ ಕರ್ನಾಟಕದ ಮೇಲಿನ ನಿರ್ಲಕ್ಷ್ಯವೋ ಗೊತ್ತಿಲ್ಲ.

ಇನ್ನು ದೊಡ್ಡ ದುರಂತ ಎಂದರೆ ತಮಿಳು ನಾಡಿನವರು ಹೋರಾಟ ಮಾಡಬೇಕು ನೀರು ಬಿಡಿ ಅಂತ ಇಲ್ಲಿ ಪರಿಸ್ಥಿತಿ ನಾವೇ ಝುಂಡ ಹಿಡಿದು, ಬೀದಿಗಿಳಿದು ನೀರು ಬಿಡ್ಬೇಡಿ ಅಂತ ಆಗ್ರಹ ಮಾಡ್ತಾ ಇದೀವಿ!

ನಮ್ಮಲ್ಲಿ ಒಂದು ವೈಚಾರಿಕ ಪ್ರಜ್ಞೆ ಇಲ್ಲದೆ ಹೋದ್ರೆ, ಪ್ರಬುದ್ಧತೆಯಿಂದ ಮತ ಹಾಕದೆ ಹೋದ್ರೆ, ಹೀಗೆ ನಮ್ಮ ನಾಡಲ್ಲಿ ಇದ್ದು ನಾವೇ ಕಾಪಾಡಿ ಅಂತ ಕಿರುಚಿಕೊಳ್ಳಬೇಕು. ಇನ್ನು ಇವೆಲ್ಲದರ ನಡುವೆಯೂ ಇದಕ್ಕೂ ನಮಗೂ ಸಂಬಂಧವೇ ಇಲ್ಲ, ಅದರ ಗೋಜಿಗೆ ನಾವೇಕೆ ಹೋಗುವುದು, ನಾವೇನು ಇಲ್ಲಿಯವರ ಎನ್ನುವ ಮನಸ್ಥಿತಿಯಲ್ಲಿ ಅನ್ಯ ರಾಜ್ಯದವರು ಇರುತ್ತಾರೆ, ಅಂತಹ ನಮ್ಮ ಸ್ನೇಹಿತರಿಗೆ ನಾವು ಅವರ ಭಾಷೆಯನ್ನ ಕಲಿತು ಅವರಿಗೆ ಸುಲಭ ಮಾಡಿಕೊಡುತ್ತೇವೆ. ಇಲ್ಲಿಗೆ ಬಂದು ತಮ್ಮ ಶಿಕ್ಷಣವನ್ನು ಪಡೆದು, ಇಲ್ಲಿಯ ನೀರು ಕುಡಿದು, ಇಲ್ಲಿಯೇ ಉದ್ಯೋಗ ಪಡೆದು ಜೀವಿಸುತ್ತಿರುವವರಿಗೆ “ಕನ್ನಡ್ ಗೊತ್ತಿಲ್ಲ” ಅಂತಲೂ ಹೇಳುವವರಿದ್ದಾರೆ. ಅದು ಅವರ ತಪ್ಪಲ್ಲ. ನಮ್ಮದೇ. ನಾವು ಸ್ನೇಹ ಮಾಡಿಕೊಂಡು ನಮ್ಮ ಪ್ರಾದೇಶಿಕತೆಯ ಕೆಸರನ್ನು ಸ್ವಲ್ಪ ಮೆತ್ತಬೇಕು. ಆಗಲೇ ಅವರು ಇಲ್ಲಿಯ ಕುರಿತು ಜಾಗೃತರಾಗುತ್ತಾರೆ.

ಆಂಗ್ಲದ ಒಂದು ನಾಣ್ಣುಡಿ ಇದೆ “Be a Roman in Rome” ಅಂತ, ಹಾಗೆ ಕರ್ನಾಟಕದಲ್ಲಿದ್ದ ಮೇಲೆ ಅವರು ಎಲ್ಲಿಯವರೆ ಆಗಲಿ ಕನ್ನಡಿಗರೇ. ನಾವು ಕೂಡ ಬರೀ ಭಾಷಣ ಶೂರರಾಗದೆ, ಸ್ಟೇಟಸ್ ವೀರರಾಗದೆ, ಬರೆದು ಕೈ ತೊಳೆದುಕೊಳ್ಳುವ ಬರಹಗಾರ ಅನ್ನಿಸಿಕೊಳ್ಳದೆ ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ಚೂರು ನಿಭಾಯಿಸೋಣ. ನಾಡು–ನುಡಿ ಉಳಿಸಿಕೊಳ್ಳುವ ಕಡೆ, ಬಳಸುವ ಮುಖಾಂತರ ಶುರು ಮಾಡೋಣ.

ನಾನು ದೇಶಪ್ರೇಮಿ ಸ್ವಾಮಿ, ರಾಜ್ಯ ಅಲ್ಲ ದೇಶ ಮುಖ್ಯ ಅನ್ನೋರಿಗೆ ರಾಷ್ಟಕವಿ ಕುವೆಂಪುರವರು ಒಂದು ಕಿವಿ ಮಾತನ್ನ ಹೇಳಿದ್ದಾರೆ:

“ನುಡಿ ಬಿಟ್ಟರೆ ನಾಡು ಬಿಟ್ಟಂತೆ ಭಾಷೆಗೇಡಿ ದೇಶಗೇಡಿಯು ಆಗುತ್ತಾನೆ”

ನಾವು ನಾಡ ಪ್ರೇಮಿಗಳಾಗೋಣ, ಅದನ್ನು ಉಳಿಸಿಕೊಳ್ಳುವ ಹಾಗೇ ನಮ್ಮ ಮುಂದಿನ ಜನಾಂಗಕ್ಕೆ ತಲುಪಿಸುವ ಜವಾಬ್ದಾರಿಯನ್ನ ಸ್ವೀಕರಿಸಿ ಯಶಸ್ವಿಯಾಗೋಣ ಎನ್ನುತ್ತಾ....

–ಅಚ್ಯುತ್ತ

# ಕೃತಕ ಬುದ್ಧಿಮತ್ತೆಯ ನ್ಯಾಯಾಧೀಶರುಗಳು!!

✍ **ಸಂಪತ್ ಜೋಶಿ**
5ನೇ ಸೆಮಿಸ್ಟರ್ ಬಿ.ಎ.ಎಲ್.ಎಲ್.ಬಿ



ಕೃತಕ ಬುದ್ಧಿಮತ್ತೆಯು (AI) ವಿವಿಧ ಕೈಗಾರಿಕೆಗಳಲ್ಲಿ ಪರಿವರ್ತಕ ಶಕ್ತಿಯಾಗಿ ಹೊರಹೊಮ್ಮಿದೆ. ನ್ಯಾಯಾಂಗದ ಮೇಲೂ ಇದರ ಪ್ರಭಾವವಿದೆ ಎಂದರದು ತಪ್ಪಾಗದು. AI ಯಲ್ಲಿನ ಪ್ರಗತಿಗಳು ಜಗತ್ತನ್ನು ರೂಪಿಸುವುದನ್ನು ಮುಂದುವರೆಸುತ್ತಿದ್ದಂತೆ, ಕಾನೂನು ವ್ಯವಸ್ಥೆಯು ಅದರ ಪ್ರಕ್ರಿಯೆಗಳು ಮತ್ತು ಫಲಿತಾಂಶಗಳನ್ನು ತಲುಪಿಸಲು ಈ ತಂತ್ರಜ್ಞಾನವನ್ನು ಬಳಸುವ ಮಾರ್ಗಗಳನ್ನು ಅನ್ವೇಷಿಸುತ್ತಿದೆ. ಕೃತಕ ಬುದ್ಧಿಮತ್ತೆಯ ಬೆಳವಣಿಗೆಗೆ ಮುಖ್ಯ ಕಾರಣ ಈ ಜೀವನಶೈಲಿ ಹಾಗು ಜೀವನ, ಇವೆರಡನ್ನೂ ಸುಗಮವಾಗಿಸುವುದು.

ಒಂದು ಕಡೆ ಜಗತ್ತಿನಲ್ಲಿ ಈ ಕೃತಕ ಬುದ್ಧಿಮತ್ತೆಯ ಬೆಳವಣಿಗೆ, ಮತ್ತೊಂದೆಡೆ ಭಾರತೀಯ ಕಾನೂನು ವ್ಯವಸ್ಥೆ. ಇದು ತಾಂತ್ರಿಕವಾಗಿ ಹೆಚ್ಚು ಮುಂದುವರಿದಿಲ್ಲ; ಏಕೆಂದರೆ ವಕೀಲರು ಇನ್ನೂ ತಮ್ಮ ಹಳೆಯ ಅಭ್ಯಾಸಗಳ ಮೇಲೆ ಅವಲಂಬಿತರಾಗಿದ್ದಾರೆ. ಮೂಲಭೂತವಾಗಿ, ಈ ಲೇಖನವು ಕೃತಕ ಬುದ್ಧಿ ಮತ್ತೆ ಮತ್ತು ಕಾನೂನು ಸಂಸ್ಥೆಗಳು, ವಕೀಲರು, ನಿಯಂತ್ರಿತ ವ್ಯಕ್ತಿಗಳು ಮತ್ತು ನಿಗಮಗಳಿಂದ ಹೇಗೆ ಬಳಸಲ್ಪ ಡುತ್ತಿದೆ ಎಂಬುದರ ಕುರಿತು. ಇದು ಶಿಕ್ಷಣ, ಮತ್ತು ಸಂಶೋಧನೆಯಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಕಾನೂನಿನ ನಡುವಿನ ಸಂಬಂಧವನ್ನು ಚರ್ಚಿಸುತ್ತದೆ.



ನ್ಯಾಯಾಂಗದಲ್ಲಿ ಕೃತಕ ಬುದ್ಧಿಮತ್ತೆ (AI) ಪಾತ್ರವು ಈ ಕೆಳಗಿನಂತಿದೆ:

1. **ಕಾನೂನು ವಿಶ್ಲೇಷಣೆ:** AI ಕಾನೂನು ವೃತ್ತಿಪರರು ಸಮಗ್ರ ಮತ್ತು ವೇಗದ ಕಾನೂನು ವಿಶ್ಲೇಷಣೆ ನಡೆಸಲು ಸಹಾಯ ಮಾಡುತ್ತದೆ. ಇದು ವಕೀಲರು ಮತ್ತು ನ್ಯಾಯಾಧೀಶರು ತಮ್ಮ ತನಿಖಾ ಪ್ರಕ್ರಿಯೆಯನ್ನು ಸುಗಮಗೊಳಿಸಲು ಮತ್ತು ಹೆಚ್ಚು ಸೂಕ್ತವಾದ ಕಾನೂನು ಮಾಹಿತಿಯನ್ನು ಪಡೆಯಲು ಸಹಾಯ ಮಾಡುತ್ತದೆ.

2. **ಸಾಹಿತ್ಯ ವಿಮರ್ಶೆ:** ನೈಸರ್ಗಿಕ ಭಾಷಾ ಸಂಸ್ಕರಣೆ (NLP) ತಂತ್ರಗಳು ೦ಖ ಅನ್ನು ಪ್ರಮುಖ ಮಾಹಿತಿಯನ್ನು ಹೊರತೆಗೆಯಲು, ಸಂಬಂಧಿತ ಅಂಶಗಳನ್ನು ಗುರುತಿಸಲು ಮತ್ತು ಸಂಭಾವ್ಯ ಸಮಸ್ಯೆಗಳನ್ನು ಸರಿ ಮಾಡಲು ಪ್ರಯೋಜಕ. ಇದು ಸಂಶೋಧನಾ ಪ್ರಕ್ರಿಯೆಯನ್ನು ವೇಗಗೊಳಿಸಲು ಮತ್ತು ದಾಖಲೆಗಳನ್ನು ನಿಖರವಾಗಿ ಪರಿಶೀಲಿಸಲು ಸಹಾಯ ಮಾಡುತ್ತದೆ.

3. **ಪ್ರೆಡಿಕ್ಟಿವ್ ಅನಾಲಿಟಿಕ್ಸ್ (ಊಹಾತ್ಮಕ ವಿಶ್ಲೇಷಣೆ):** ಮಾದರಿಗಳನ್ನು ಗುರುತಿಸಲು ಮತ್ತು ಕಾನೂನು ಫಲಿತಾಂಶಗಳನ್ನು ಊಹಿಸಲು AI ಅಲ್ಗಾರಿದಮ್‌ಗಳು ಹಿಂದಿನ ಘಟನೆಗಳಿಂದ ಐತಿಹಾಸಿಕ ಡೇಟಾವನ್ನು ವಿಶ್ಲೇಷಿಸುತ್ತದೆ. ಕೇಸ್ ಕಾನೂನು, ನ್ಯಾಯಾಂಗ ನಿರ್ಧಾರಗಳು ಮತ್ತು ಸಂಬಂಧಿತ ಕಾನೂನು ತತ್ವಗಳಂತಹ ಅಂಶಗಳನ್ನು ಪರಿಗಣಿಸುವ ಮೂಲಕ, AI ವ್ಯವಸ್ಥೆಗಳು ಪ್ರಕರಣದ ಸಂಭವನೀಯ ಫಲಿತಾಂಶದ ಒಳನೋಟ ವನ್ನು ಒದಗಿಸಬಹುದು ಮತ್ತು ಇದು ನ್ಯಾಯವಾದಿಗಳು ಮತ್ತು ದಾವೆದಾರರಿಗೆ ಕಾನೂನು ಕಾರ್ಯವಿಧಾನಗಳು ಮತ್ತು ಪರಿಹಾರಗಳ ಕುರಿತು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ನ್ಯಾಯಾಲಯಕ್ಕೆ ಸಹಾಯ ಮಾಡುತ್ತದೆ.

4. **ಪ್ರಕರಣ ನಿರ್ವಹಣೆ:** ನ್ಯಾಯಾಂಗದ ಆಡಳಿತದ ವಿವಿಧ ಅಂಶಗಳನ್ನು ನಿರ್ವಹಿಸಲು AI ಸಹಾಯ ಮಾಡುತ್ತದೆ. ಸ್ವಯಂಚಾಲಿತ ವ್ಯವಸ್ಥೆಗಳು ವ್ಯಾಜ್ಯ ನಿರ್ವಹಣೆ, ಕಡತ ನಿರ್ವಹಣೆ ಮತ್ತು ದಾವೆ ಹೂಡಿಕೆ, ನ್ಯಾಯಾಲಯದ ಸಿಬ್ಬಂದಿಯ ಮೇಲಿನ ಹೊರೆ ಕಡಿಮೆ ಮಾಡುವುದು ಮತ್ತು ನ್ಯಾಯಾಂಗ ಪ್ರಕ್ರಿಯೆಯಲ್ಲಿ ದಕ್ಷತೆಯನ್ನು ಹೆಚ್ಚಿಸುವುದು ಮುಂತಾದ ಕಾರ್ಯಗಳನ್ನು ನಿಭಾಯಿಸಬಹುದು ಮತ್ತು ತುರ್ತು ವ್ಯಾಜ್ಯಗಳು, ಸಂಕೀರ್ಣ ವ್ಯಾಜ್ಯಗಳು ಮತ್ತು ಇತರ ಸಂಬಂಧಿತ ಅಂಶಗಳ ಆಧಾರದ ಮೇಲೆ ಪ್ರಕರಣಗಳಿಗೆ ಆದ್ಯತೆ ನೀಡಲು AI ಸಹಾಯ ಮಾಡುತ್ತದೆ.

5. **ಶಿಕ್ಷೆ ಮತ್ತು ಅಪಾಯದ ಮೌಲ್ಯಮಾಪನ:** ಅಪರಾಧದ ಸ್ವರೂಪ, ಅಪರಾಧಿಯ ಇತಿಹಾಸ ಮತ್ತು ಸಂಬಂಧಿತ ಕಾನೂನು ಮಾರ್ಗಸೂಚಿಗಳನ್ನು ಒಳಗೊಂಡಂತೆ ವಿವಿಧ ಅಂಶಗಳನ್ನು ವಿಶ್ಲೇಷಿಸುವ ಮೂಲಕ AI–ಆಧಾರಿತ ವ್ಯವಸ್ಥೆಗಳು ನ್ಯಾಯಾಧೀಶರಿಗೆ ಸೂಕ್ತವಾದ ಶಿಕ್ಷೆಯನ್ನು ನಿರ್ಧರಿಸಲು ಸಹಾಯ ಮಾಡುತ್ತದೆ. ಆದಾಗ್ಯೂ, ಅನ್ಯಾಯದ ಅಥವಾ ತಾರತಮ್ಯದ ಫಲಿತಾಂಶಗಳನ್ನು ತಡೆಗಟ್ಟಲು AI ಅಲ್ಗಾರಿದಮ್‌ಗಳು ನ್ಯಾಯೋಚಿತ, ಪಾರದರ್ಶಕ ಮತ್ತು ನಿಷ್ಪಕ್ಷಪಾತ ಎಂದು ಖಚಿತಪಡಿಸಿಕೊಳ್ಳುವುದು ಮುಖ್ಯವಾಗಿದೆ.

6. **ಕಾನೂನು ಚಾಟ್ ಬಾಟ್‌ಗಳು ಮತ್ತು ವರ್ಚುವಲ್ ಅಸಿಸ್ಟೆಂಟ್‌ಗಳು:** AI ಚಾಲಿತ ಚಾಟ್ ಬಾಟ್‌ಗಳು ಮತ್ತು ವರ್ಚುವಲ್ ಸಹಾಯಕರು ಕಾನೂನು ಮಾಹಿತಿಯನ್ನು ಒದಗಿಸಬಹುದು, ಸಾಮಾನ್ಯ ಕಾನೂನು ಪ್ರಶ್ನೆಗಳಿಗೆ ಉತ್ತರಿಸಬಹುದು ಮತ್ತು ಕಾನೂನು ಪ್ರಕ್ರಿಯೆಯ ಮೂಲಕ ವ್ಯಕ್ತಿಗಳಿಗೆ ಮಾರ್ಗದರ್ಶನ ನೀಡಬಹುದು. ಈ ಉಪಕರಣಗಳು ಕಾನೂನು ವೃತ್ತಿಪರರಿಗೆ ಸುಲಭ ಪ್ರವೇಶವನ್ನು ಹೊಂದಿರದ ಜನರಿಗೆ ಕಾನೂನು ಮಾರ್ಗದರ್ಶನವನ್ನು ಒದಗಿಸುವ ಮೂಲಕ ನ್ಯಾಯದ ಪ್ರವೇಶವನ್ನು ಹೆಚ್ಚಿಸಬಹುದು.

**ನ್ಯಾಯಾಂಗದಲ್ಲಿ ತಂತ್ರಜ್ಞಾನದ ಬಳಕೆಯ ಉದಾಹರಣೆಗಳೇನು?**

ವರ್ಚುವಲ್ ವಿಚಾರಣೆ: ಕೋವಿಡ್–19 ಸಾಂಕ್ರಾಮಿಕ ಸಮಯದಲ್ಲಿ ಇ–ಫೈಲಿಂಗ್ ಮತ್ತು ವರ್ಚುವಲ್ ತಂತ್ರಜ್ಞಾನದ ಬಳಕೆಯಲ್ಲಿ ಗಮನಾರ್ಹ ಹೆಚ್ಚಳ ಕಂಡುಬಂದಿದೆ.

SUVAS (ಸುಪ್ರೀಂ ಕೋರ್ಟ್ ವಿಧಿಕ್ ಅನುವಾದ್





ಕೃತಕ ಬುದ್ಧಿಮತ್ತೆಯ ನ್ಯಾಯಾಧೀಶರುಗಳು!!

ಸಾಫ್ಟ್‌ವೇರ್): ಇದು ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಿಸಲು ಸಹಾಯ ಮಾಡುವ ೦ಖ ವ್ಯವಸ್ಥೆಯಾಗಿದೆ. ನ್ಯಾಯದ ಪ್ರವೇಶವನ್ನು ಹೆಚ್ಚಿಸಲು ಇದು ಮತ್ತೊಂದು ಪ್ರಮುಖ ಪ್ರಯತ್ನವಾಗಿದೆ.

SUPACE (ಸುಪ್ರೀಮ್ ಕೋರ್ಟ್ ಪೋರ್ಟಲ್ ಫಾರ್ ಅಸಿಸ್ಟೆನ್ಸ್ ಇನ್ ಕೋರ್ಟ್ ಎಫಿಶಿಯೆನ್ಸಿ): ಭಾರತದ ಸುಪ್ರೀಂ ಕೋರ್ಟ್‌ನಿಂದ ಇತ್ತೀಚೆಗೆ ಆರಂಭಗೊಂಡ ವ್ಯವಸ್ಥೆ. ಯಾಂತ್ರೀಕರಣದ ಅಗತ್ಯವಿರುವ ನ್ಯಾಯಾಂಗ ಪ್ರಕ್ರಿಯೆಗಳನ್ನು ಮೊದಲು ಅರ್ಥಮಾಡಿಕೊಳ್ಳಲು ಇದನ್ನು ವಿನ್ಯಾಸಗೊಳಿಸಲಾಗಿದೆ ಮತ್ತು ನಂತರ AI ಮೂಲಕ ಯಾವ ನ್ಯಾಯಾಂಗ ಪ್ರಕ್ರಿಯೆಗಳನ್ನು ಸ್ವಯಂಚಾಲಿತಗೊಳಿಸಬಹುದು ಎಂಬುದನ್ನು ಸ್ಪಷ್ಟಪಡಿಸಲು ನ್ಯಾಯಾಲಯಕ್ಕೆ ಸಹಾಯ ಮಾಡುತ್ತದೆ.

ಇ–ಕೋರ್ಟ್‌ಗಳು ಅಥವಾ ವರ್ಚುವಲ್ ಕೋರ್ಟ್‌ಗಳು: ನ್ಯಾಯಾಲಯದ ಆದೇಶಗಳು ಹಾಗು ಇತರೆ ಅಗತ್ಯ ಮಾಹಿತಿಗಳು ಅಂತರ್ಜಾಲ ಜಾಲತಾಣಗಳಲ್ಲಿ ಲಭ್ಯವಿರುವುದರಿಂದ ಇದು ನ್ಯಾಯಲಯದ ಹಾಗು ಜನರ ಹಣ ಮತ್ತು ಸಮಯವನ್ನು ಉಳಿಸುತ್ತದೆ.

ಸರ್ಕಾರದ ನೀತಿ: 2018 ರಲ್ಲಿ, NITI ಆಯೋಗ್ 'ಕೃತಕ ಬುದ್ಧಿಮತ್ತೆಗಾಗಿ ರಾಷ್ಟ್ರೀಯ ನೀತಿ' ಎಂಬ ನೀತಿಯನ್ನು ಬಿಡುಗಡೆ ಮಾಡಿತು; ಇದು ವಿವಿಧ ವಲಯಗಳಲ್ಲಿ ಕೃತಕ ಬುದ್ಧಿಮತ್ತೆಯ ಪ್ರಾಮುಖ್ಯತೆಯನ್ನು ಪರಿಗಣಿಸಿತು. ಇದರ ಕುರಿತಾಗಿಯೇ ರಾಷ್ಟ್ರೀಯ ನೀತಿಯೊಂದನ್ನು ರೂಪಿಸಬೇಕೆಂದು ಬಜೆಟ್ ನಲ್ಲಿ ಸಹ ಪ್ರಸ್ತಾಪಿಸಲಾಯಿತು.

**ಇದೇ ರೀತಿಯ ಜಾಗತಿಕ ಕಾರ್ಯಕ್ರಮಗಳು:**

US: COMPAS (ಕರೆಕ್ಷನಲ್ ಪಾರ್ಲಿಮೆಂಟರಿ ಡೇಟಾ ಫಾರ್ ನ್ಯೂ ಸೆಂಟೆನ್ಸಿಂಗ್) (ಹೊಸ ಅಪರಾಧಗಳಿಗೆ ಹಳೆಯ ಮಾಹಿತಿಯಿಂದ ಸಲಹೆಗಳು)

ಯುಕೆ: ಹಾರ್ಟ್ (ರಿಸ್ಕ್ ಅಸೆಸ್ಮೆಂಟ್ ಟೂಲ್) (ಅಪಾಯವನ್ನು ಕಂಡುಹಿಡಿಯುವ ಸಾಧನ)

ಚೀನಾ/ಮೆಕ್ಸಿಕೋ/ರಷ್ಯಾ: ಕಾನೂನು ಸಲಹೆ, ಪಿಂಚಣಿಗಳ ಅನುಮೋದನೆ.

ಎಸ್ಟೋನಿಯಾ: ಸಣ್ಣ ವ್ಯಾಜ್ಯಗಳ ವಿಷಯಗಳಲ್ಲಿ ನಿರ್ಧರಿಸುವ ರೋಬೋಟ್ ನ್ಯಾಯಾಧೀಶರು.

ಆಸ್ಟ್ರಿಯಾ: ಕಾರ್ಯತಂತ್ರದ ದಾಖಲಾತಿ.

ಅರ್ಜೆಂಟೀನಾ/ಕೊಲಂಬಿಯಾ: ಪ್ರೊಮೆಟಿಯಾ (ನಿಮಿಷಗಳಲ್ಲಿ ತುರ್ತು ಮಾಹಿತಿಯನ್ನು ತೋರಿಸುವುದು).

ಸಿಂಗಾಪುರ: ನ್ಯಾಯಾಲಯದ ಪ್ರಕ್ರಿಯೆಗಳ ನೈಜ–ಸಮಯದ ಪ್ರತಿಗಳು.

ಭಾರತೀಯ ವಕೀಲ ವೃತ್ತಿಯಲ್ಲಿ ಕೃತಕ ಬುದ್ಧಿಮತ್ತೆಯ ಪ್ರಸ್ತುತ ಸನ್ನಿವೇಶ

ಉತ್ಪನ್ನವು ಕಂಪ್ಯೂಟರ್ ಅಥವಾ ರೋಬೋಟ್ ಆಗಿದ್ದು ಅದು ಮಾನವ ಬುದ್ಧಿವಂತಿಕೆಯ ಅಗತ್ಯವಿರುವ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ. ಇದು ಜನರಿಗೆ ಅವರ ದೈನಂದಿನ ಕೆಲಸಗಳಿಂದ ಸ್ವಾತಂತ್ರ್ಯವನ್ನು ನೀಡುವ ಮೂಲಕ ಸಹಾಯ ಮಾಡುತ್ತದೆ. ಇದು ಮಾನವ ತಾರ್ಕಿಕತೆಗೆ ಸಂಪರ್ಕ ಹೊಂದಿದೆ ಮತ್ತು ಕಂಪ್ಯೂಟರ್‌ಗಳು ಮಾಡಲಾಗದ ಕಾರ್ಯಗಳ ಮೇಲೆ ಹೆಚ್ಚು ಗಮನಹರಿಸಲು ನಿಮಗೆ ಅನುಮತಿಸುತ್ತದೆ. ಮನುಷ್ಯರಂತೆ ಯೋಚಿಸುವುದು, ಕಲಿಯುವುದು, ವಿವೇಚಿಸುವುದು, ಸಂವಹನ ಮಾಡುವುದು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಹೇಗೆ ಎಂಬುದನ್ನು ಕಂಪ್ಯೂಟರ್‌ಗಳು ಹೇಗೆ ಕಲಿಸುತ್ತವೆ ಎಂಬುದರ ವಿಜ್ಞಾನವಾಗಿದೆ. ಇದು ಜನರ ಮೇಲೆ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳನ್ನು ಬೀರುತ್ತದೆ ಏಕೆಂದರೆ ಇದು ನಮ್ಮ ಕೆಲಸಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಲು ಸಹಾಯ ಮಾಡುತ್ತದೆ ಆದರೆ ಮತ್ತೊಂದೆಡೆ ಇದು ಅಕ್ಷರಶಃ ಸಾವಿರಾರು ಉದ್ಯೋಗಗಳನ್ನು ತೆಗೆದುಕೊಳ್ಳುತ್ತದೆ. ಕೋಡ್‌ನೊಂದಿಗೆ ಕೃತಕ ಬುದ್ಧಿಮತ್ತೆಯ ಪರಿಕಲ್ಪನೆಯನ್ನು ಸಂಯೋಜಿಸುವುದು ಕೋಡ್ ಅನ್ನು ಹೆಚ್ಚು ತಾರ್ಕಿಕ, ಸರಳ, ಸಹಾಯಕ, ಪ್ರವೇಶಿಸಬಹುದಾದ ಅಥವಾ ಊಹಿಸಬಹುದಾದಂತೆ ಮಾಡಲು ಕಂಪ್ಯೂಟೇಶನಲ್ ಮತ್ತು ಗಣಿತದ ತಂತ್ರಗಳನ್ನು ಬಳಸುತ್ತದೆ ಕೃತಕ ಬುದ್ಧಿಮತ್ತೆ ಉತ್ಪನ್ನಗಳು ಒಪ್ಪಂದದ ವಿಶ್ಲೇಷಣೆ ಮತ್ತು ವಿಶ್ಲೇಷಣೆಯಂತಹ ಪರಿಕಲ್ಪನೆಗಳನ್ನು ವಿಶ್ಲೇಷಿಸಲು ಕೌಶಲ್ಯಗಳನ್ನು ಪರಿಚಯಿಸುತ್ತವೆ. ಸಂವಹನ ಟೋನ್, ಮತ್ತು ಅಲ್ಲಿ ಕಂಪ್ಯೂಟರ್ ಏನು ಬರೆಯಬೇಕೆಂದು ಅರ್ಥಮಾಡಿಕೊಳ್ಳುತ್ತದೆ ಮತ್ತು ಬರೆಯಲು ಪತ್ರವನ್ನು ಸಿದ್ಧಪಡಿಸುತ್ತದೆ.

ಭಾರತದಲ್ಲಿ ವಕೀಲ ವೃತ್ತಿಯು ಹೆಚ್ಚು ಕೈಗೆಟುಕುವ ಮತ್ತು ಸಾಂಪ್ರದಾಯಿಕವಾಗಿದೆ. ಕಾನೂನಿನಲ್ಲಿ ಕೃತಕ ಬುದ್ಧಿಮತ್ತೆಯ ಪರಿಕಲ್ಪನೆಯ ಬಗ್ಗೆ ಹಿರಿಯ ವಕೀಲರು ಸ್ವಲ್ಪಮಟ್ಟಿಗೆ ಹಿಂಜರಿಯುತ್ತಾರೆ. ಅವರು ಈಗ ಟೈಪ್ ರೈಟರ್‌ಗಳ ಬದಲಿಗೆ ಲ್ಯಾಪ್‌ಟಾಪ್/ಕಂಪ್ಯೂಟರ್‌ಗಳನ್ನು ಬಳಸುತ್ತಿದ್ದಾರೆ ಅಥವಾ ಪುಸ್ತಕಗಳ ಬದಲಿಗೆ ಕಾನೂನು ಸಂಶೋಧನೆಗಾಗಿ ಆನ್‌ಲೈನ್ ವೆಬ್‌ಸೈಟ್‌ಗಳನ್ನು ಬಳಸುತ್ತಿದ್ದಾರೆ (ಉದಾಹರಣೆಗೆ ಮನು ಪೇಪರ್ ಮತ್ತು ಎಸ್‌ಸಿಸಿ ಆನ್‌ಲೈನ್) ಅಥವಾ ಡಾಕ್ಯುಮೆಂಟ್‌ಗಳನ್ನು ಫ್ಯಾಕ್ಸ್ ಯಂತ್ರದಿಂದ ಕಳುಹಿಸಲಾಗುತ್ತದೆ ಮತ್ತು ನಿರಂತರವಾಗಿ ಬದಲಾವಣೆಗಳನ್ನು ಮಾಡಲಾಗುತ್ತಿದೆ. ಆದಾಗ್ಯೂ, ಕೆಲವು ವಕೀಲರು ಕೃತಕ ಬುದ್ಧಿಮತ್ತೆಯತ್ತ ತಮ್ಮ ಗಮನವನ್ನು ಬದಲಾಯಿಸುತ್ತಿದ್ದಾರೆ ಏಕೆಂದರೆ ಇದು ಪ್ರಸ್ತುತ ಕಾನೂನು ಸಂಸ್ಥೆಗಳು ಮತ್ತು ವಕೀಲರು ಕಾರ್ಯನಿರ್ವಹಿಸುತ್ತಿರುವ ವಿಧಾನವನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ. ಆದರೆ ಪ್ರಸ್ತುತ, ಕೃತಕ ಬುದ್ಧಿಮತ್ತೆ ಭಾರತದಲ್ಲಿ ಆರಂಭಿಕ ಹಂತದಲ್ಲಿದೆ ಮತ್ತು ಅದರ ಸರಿಯಾದ ಅನುಷ್ಠಾನಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಕಾನೂನು ಕ್ಷೇತ್ರದಲ್ಲಿ ತಂತ್ರಜ್ಞಾನದ ಸುಧಾರಣೆ ಖಂಡಿತವಾಗಿಯೂ ಕಾನೂನು ವೃತ್ತಿಪರರ ಕಾರ್ಯಗಳಲ್ಲಿ ಬೆಳವಣಿಗೆಗೆ ಕಾರಣವಾಗಿದೆ. ಭಾರತದಲ್ಲಿ ವಕೀಲರು ಕೆಲಸ ಮಾಡುವ ಮತ್ತು ಕಾನೂನನ್ನು ನೋಡುವ ವಿಧಾನವನ್ನು ಬದಲಾಯಿಸುವಲ್ಲಿ ಇದು ದೊಡ್ಡ ಪಾತ್ರವನ್ನು ವಹಿಸುತ್ತದೆ. ಭಾರತೀಯ ಕಾನೂನು ವ್ಯವಸ್ಥೆಯು ಅತ್ಯಂತ ದೊಡ್ಡದಾಗಿದೆ ಮತ್ತು ನಮ್ಮ ಸಂವಿಧಾನವು ಅತ್ಯಂತ ಉದ್ದವಾಗಿದೆ. ಡಾಕ್ಯುಮೆಂಟ್ ಅನ್ನು ರಚಿಸುವುದು ಮತ್ತು ತಮ್ಮ ಗ್ರಾಹಕರಿಗೆ ಭೌತಿಕವಾಗಿ ಹಾಜರಾಗುವಂತಹ ಅನೇಕ ಕಾರ್ಯಗಳನ್ನು ಮಾಡಲು ವಕೀಲರು ಪ್ರಯತ್ನಿಸಲು ಬಯಸುತ್ತಾರೆ.

ಆದ್ದರಿಂದ, ಕೃತಕ ಬುದ್ಧಿಮತ್ತೆಯ ಬಳಕೆಯೊಂದಿಗೆ, ವಕೀಲರು ತಮ್ಮ ಕೆಲಸವನ್ನು ಸೆಕೆಂಡುಗಳಲ್ಲಿ ಪೂರ್ಣಗೊಳಿಸುತ್ತಾರೆ. ವಕೀಲರು ಮಾಡುವ ಸಂಶೋಧನಾ ಕಾರ್ಯಕ್ಕೆ ವಿವಿಧ ಮಾನವ–ಗಂಟೆಗಳ ಅಗತ್ಯವಿರುತ್ತದೆ ಮತ್ತು ಇದು ಲಾಭವನ್ನು ಕಡಿಮೆ ಮಾಡುತ್ತದೆ.

# ಕೃತಕ ಬುದ್ಧಿಮತ್ತೆಯ ನ್ಯಾಯಾಧೀಶರುಗಳು!!

ಆದ್ದರಿಂದ, ಕೃತಕ ಬುದ್ಧಿಮತ್ತೆಯೊಂದಿಗೆ, ಇಡೀ ಕಾನೂನು ಸಮಾಜವನ್ನು ಸಮತೋಲನಗೊಳಿಸಬಹುದು ಏಕೆಂದರೆ ಇದು ಸಂಶೋಧನಾ ಕಾರ್ಯವನ್ನು ಪೂರ್ಣಗೊಳಿಸಲು ಸೆಕೆಂಡುಗಳನ್ನು ತೆಗೆದುಕೊಳ್ಳುತ್ತದೆ. ಇದು ಡ್ರಾಫ್ಟಿಂಗ್ ಸಮಯವನ್ನು ಉಳಿಸಲು ಸಹಾಯ ಮಾಡುತ್ತದೆ ಮತ್ತು ನ್ಯಾಯಾಂಗ ಪ್ರಕ್ರಿಯೆಯಲ್ಲಿ ವಕೀಲರು ಹೆಚ್ಚಿನ ಸಮಯವನ್ನು ಪಡೆಯುತ್ತಾರೆ. ವಿಶ್ಲೇಷಣೆಗಳ ಮೂಲಕ ಹೆಚ್ಚುವರಿ ಒಳನೋಟಗಳು ಮತ್ತು ಶಾರ್ಟ್‌ಕಟ್‌ಗಳನ್ನು ಒದಗಿಸುವ ಮೂಲಕ ವಕೀಲರು ಸರಿಯಾದ ಶ್ರದ್ಧೆ ಮತ್ತು ಸಂಶೋಧನೆಯನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಕಾನೂನು ವೃತ್ತಿಪರರು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸುವ ವಿವಿಧ ಕ್ಷೇತ್ರಗಳಿವೆ. ಈ ಸಾಂಕ್ರಾಮಿಕದಲ್ಲಿ, ತಂತ್ರಜ್ಞಾನವು ಬಹು-ಕ್ರಿಯಾತ್ಮಕ ಸಾಧನಗಳಿಗೆ ದಾರಿ ಮಾಡಿಕೊಟ್ಟಿದೆ ಎಂದು ನಾವು ಗಮನಿಸಬಹುದು ಏಕೆಂದರೆ ಅದು ನಮ್ಮ ಜೀವನವನ್ನು ಸುಲಭ, ತ್ವರಿತ, ಸುಧಾರಿತ ಮತ್ತು ಉತ್ತೇಜಕವಾಗಿಸಿದೆ.

ಇಂದು, ಇದು ನಮಗೆ ತಪ್ಪಿಸಲು ಸಾಧ್ಯವಾಗದ ಅತ್ಯಗತ್ಯ ಸಾಧನವಾಗಿದೆ. ಏಕೆಂದರೆ ಈ ಕ್ರಿಯಾತ್ಮಕ ಜಗತ್ತಿನಲ್ಲಿ ತಂತ್ರಜ್ಞಾನವಿಲ್ಲದ ಜೀವನವು ಅರ್ಥಹೀನವಾಗಿದೆ. ಇದು ನಮ್ಮ ಜೀವನದ ಒಂದು ಭಾಗವಾಗಿದೆ ಮತ್ತು ಈ ಜಗತ್ತಿನಲ್ಲಿ ನಾವು ಬದುಕುಳಿಯುವ ಮಾರ್ಗಗಳಲ್ಲಿ ಒಂದಾಗಿದೆ.

ಭಾರತದಲ್ಲಿ ಕೃತಕ ಬುದ್ಧಿಮತ್ತೆ ಸ್ಟಾರ್ಟ್‌ಅಪ್‌ಗಳು

**1) ಸ್ಪಾಟ್ ಡ್ರಾಫ್ಟ್:** ಒಪ್ಪಂದಗಳನ್ನು ನಿಮಿಷಗಳಲ್ಲಿ ಪರಿಶೀಲಿಸಲಾಗುತ್ತದೆ. ಇದು ಗುರುಗ್ರಾಮ್ ಮೂಲದ ಸ್ಟಾರ್ಟಪ್ ಆಗಿದ್ದು ನಮ್ಮ ಅಗತ್ಯಗಳಿಗೆ ಅನುಗುಣವಾಗಿ ಒಪ್ಪಂದಗಳನ್ನು ನಿರ್ವಹಿಸ ಬಹುದು. ಇದು ತನ್ನ ಗ್ರಾಹಕರಿಗೆ ಕರಡು ಮತ್ತು ಒಪ್ಪಂದಗಳಿಗೆ ಸಹಿ ಮಾಡುವ ಹಕ್ಕನ್ನು ನೀಡುತ್ತದೆ. ಇದು ಸ್ವಯಂಚಾಲಿತ ಮೆಮೊರಿ ಮತ್ತು ಖರ್ಚು ವೈಶಿಷ್ಟ್ಯಗಳನ್ನು ಹೊಂದಿದೆ.

**2) ಕೇಸ್ ಮೈನ್:** ಅನುರಾಧಾ ಯಾದವ್ ಅವರು ಪ್ರಾರಂಭಿಸಿದರು, ಇದು ಕೃತಕ ಬುದ್ಧಿಮತ್ತೆ ಆಧಾರಿತ ಕಾನೂನು ವಿಶ್ಲೇಷಣೆ ವೇದಿಕೆಯಾಗಿದ್ದು ಅದು ವಿವಿಧ ಮಾಹಿತಿ ಸಂಕೇತಗಳ ನಡುವಿನ ಸಂಬಂಧಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಇದು ಕೇಸ್ ಕಾನೂನು ಚೌಕಟ್ಟನ್ನು ಸಹ ಒದಗಿಸುತ್ತದೆ, ಇದು ಕಡಿಮೆ ಅವಧಿಯಲ್ಲಿ ಹೆಚ್ಚಿನ ಕಾನೂನು ವಿಶ್ಲೇಷಣೆಗೆ ಸಹಾಯ ಮಾಡುತ್ತದೆ.

**3) ಕೇಸ್ ಐಕ್ಯೂ:** ಇದು ಸಂಶೋಧನೆಯಲ್ಲಿ ಕಾನೂನು ಸಹಾಯವಾಗಿ ಕಾರ್ಯನಿರ್ವಹಿಸಬಹುದಾದ ಸಾಧನವಾಗಿದೆ ಏಕೆಂದರೆ ಇದು ಹೊರಗಿಡಬಹುದಾದ ಮಾಹಿತಿಯ ಸಂಬಂಧಿತ ನಿಯಮಗಳನ್ನು ಗುರುತಿಸುವ ಮೂಲಕ ಅಥವಾ ಪರ್ಯಾಯ ವಾದಗಳನ್ನು ಶಿಫಾರಸು ಮಾಡುವ ಮೂಲಕ ಸಹಾಯವಾಗಿ ಕಾರ್ಯನಿರ್ವಹಿಸುತ್ತದೆ. ಅದು ಪ್ರತಿಯಾಗಿ, ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಒಳನೋಟಗಳನ್ನು ಬಹಿರಂಗಪಡಿಸಬಹುದು.

**4) ಕಾನೂನು ಹತ್ತಿರ:** ಮುಂಬೈನಲ್ಲಿ ವಕೀಲರಿಗೆ ಕೃತಕ ಬುದ್ಧಿಮತ್ತೆ ಆಧಾರಿತ ಪರಿಹಾರವೂ ಇದೆ. ಡೇಟಾ ಸೆಟ್‌ಗಳ ನಡುವಿನ ಸಂಬಂಧಗಳನ್ನು ಸೆರೆಹಿಡಿಯಲು ಇದು NLP (ನೈಸರ್ಗಿಕ ಭಾಷಾ ಸಂಸ್ಕರಣೆ) ತಂತ್ರಜ್ಞಾನವನ್ನು ಬಳಸುತ್ತದೆ.

**5) ಪೆನ್ಸಿವ್:** ಇದು ಕೃತಕ ಬುದ್ಧಿಮತ್ತೆ ಆಧಾರಿತ ಕಾನೂನು ವಿಶ್ಲೇಷಣೆಯನ್ನು ಸಹ ನಡೆಸುತ್ತದೆ. ಅನೇಕ ಗ್ರಾಹಕರು ಇದನ್ನು ಬಳಸುತ್ತಾರೆ. ಉತ್ಪನ್ನವನ್ನು ಅಭಿವೃದ್ಧಿಪಡಿಸಲು ಇದು ಪ್ರಸ್ತುತ ಐಐಟಿ-ಮದ್ರಾಸ್‌ನೊಂದಿಗೆ ಸಹಕರಿಸುತ್ತಿದೆ ಮತ್ತು ಇತರ ಕಂಪನಿಗಳು ಸಹ ಇದನ್ನು ಬಳಸುತ್ತಿವೆ.

ನ್ಯಾಯಾಂಗ ವ್ಯವಸ್ಥೆಯಲ್ಲಿ AI ಯ ಪ್ರಯೋಜನಗಳು

**1. ಹೆಚ್ಚಿದ ದಕ್ಷತೆ:** AI ತಂತ್ರಜ್ಞಾನವು ಕಾನೂನು ಹುಡುಕಾಟಗಳು ಮತ್ತು ದಾಖಲೆ ವಿಶ್ಲೇಷಣೆಯಂತಹ ಸಮಯ ತೆಗೆದುಕೊಳ್ಳುವ ಪ್ರಕ್ರಿಯೆಗಳನ್ನು ಸರಳಗೊಳಿಸುತ್ತದೆ. AI-ಚಾಲಿತ ಅಲ್ಗಾರಿದಮ್‌ಗಳು ದೊಡ್ಡ ಡೇಟಾಬೇಸ್‌ಗಳನ್ನು ವಿಶ್ಲೇಷಿಸಬಹುದು, ವಕೀಲರಿಗೆ ಸಂಬಂಧಿತ ಮಾಹಿತಿ ಮತ್ತು ಭವಿಷ್ಯವಾಣಿಗಳನ್ನು ಒದಗಿಸುತ್ತದೆ. ಇದು ತನಿಖೆಗಳನ್ನು ವೇಗಗೊಳಿಸುತ್ತದೆ ಮತ್ತು ವಕೀಲರು ಮತ್ತು ನ್ಯಾಯಾಧೀಶರು ಪ್ರಮುಖ ಮಾಹಿತಿಯನ್ನು ತ್ವರಿತವಾಗಿ ಪ್ರವೇಶಿಸಲು ಅನುವು ಮಾಡಿಕೊಡುತ್ತದೆ, ಹೀಗಾಗಿ ಒಟ್ಟಾರೆ ದಕ್ಷತೆಯನ್ನು ಸುಧಾರಿಸುತ್ತದೆ.

**2. ಸುಧಾರಿತ ನಿಖರತೆ:** AI ವ್ಯವಸ್ಥೆಗಳು ಹೆಚ್ಚಿನ ಪ್ರಮಾಣದ ನಿಯಂತ್ರಕ ದಾಖಲೆಗಳನ್ನು ಹೆಚ್ಚಿನ ನಿಖರತೆಯೊಂದಿಗೆ ಪ್ರಕ್ರಿಯೆಗೊಳಿಸಲು ಸಮರ್ಥವಾಗಿವೆ. ನಮಗೆ ನೈಸರ್ಗಿಕ ಭಾಷಾ ಸಂಸ್ಕರಣೆ (NLP) ತಂತ್ರಗಳಲ್ಲಿ, AI ಅಲ್ಗಾರಿದಮ್‌ಗಳು ಪ್ರಮುಖ ಮಾಹಿತಿಯನ್ನು ಹೊರತೆಗೆಯಬಹುದು, ಸಂಬಂಧಿತ ಅಂಶಗಳನ್ನು ಗುರುತಿಸಬಹುದು ಮತ್ತು ಸಂಭಾವ್ಯ ಸಮಸ್ಯೆಗಳನ್ನು ಫ್ಲ್ಯಾಗ್ ಮಾಡಬಹುದು. ಇದು ಮಾನವ ದೋಷದ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ ಮತ್ತು ಡಾಕ್ಯುಮೆಂಟ್ ವಿಶ್ಲೇಷಣೆಯ ನಿಖರತೆಯನ್ನು ಸುಧಾರಿಸುತ್ತದೆ.

**3. ಪ್ರೆಡಿಕ್ಟಿವ್ ಅನಾಲಿಟಿಕ್ಸ್:** ಮಾದರಿಗಳನ್ನು ಗುರುತಿಸಲು ಮತ್ತು ಕಾನೂನು ಫಲಿತಾಂಶಗಳನ್ನು ಊಹಿಸಲು AI ಅಲ್ಗಾರಿದಮ್‌ಗಳು ಹಿಂದಿನ ಘಟನೆಗಳಿಂದ ಐತಿಹಾಸಿಕ ಡೇಟಾವನ್ನು ವಿಶ್ಲೇಷಿಸಬಹುದು. ಇದು ವಕೀಲರು ಮತ್ತು ದಾವೆದಾರರಿಗೆ ತಿಳುವಳಿಕೆಯುಳ್ಳ ನಿರ್ಧಾರಗಳನ್ನು ಮಾಡಲು ಸಹಾಯ ಮಾಡುತ್ತದೆ, ಉದಾಹರಣೆಗೆ ಯಶಸ್ಸಿನ ಸಾಧ್ಯತೆಯನ್ನು ನಿರ್ಧರಿಸುವುದು, ಪರಿಣಾಮಕಾರಿ ಕಾನೂನು ತಂತ್ರಗಳನ್ನು ಅಭಿವೃದ್ಧಿಪಡಿಸುವುದು, ಪರಿಹಾರಗಳನ್ನು ಹುಡುಕುವುದು ಮತ್ತು ತನಿಖೆಗಳನ್ನು ಹೇರುವುದು ಪ್ರಕರಣ ನಿರ್ವಹಣೆ ಮತ್ತು ಸಂಪನ್ಮೂಲ ಹಂಚಿಕೆಯನ್ನು ಸುಧಾರಿಸಬಹುದು.

**4. ಸ್ವಯಂಚಾಲಿತ ಕೇಸ್ ಮ್ಯಾನೇಜ್‌ಮೆಂಟ್:** AI ತಂತ್ರಜ್ಞಾನವು ನ್ಯಾಯಾಂಗ ವ್ಯವಸ್ಥೆಯೊಳಗೆ ಕೇಸ್ ಮ್ಯಾನೇಜ್‌ಮೆಂಟ್, ಡಾಕೆಟ್ ಮ್ಯಾನೇಜ್‌ಮೆಂಟ್ ಮತ್ತು ಡಾಕ್ಯುಮೆಂಟ್‌ಗಳ ಫೈಲಿಂಗ್‌ನಂತಹ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತದೆ. ನ್ಯಾಯಾಲಯದ ಸಿಬ್ಬಂದಿಯ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಮೂಲಕ, AI ಕಾರ್ಯಾಚರಣೆಗಳನ್ನು ಸುವ್ಯವಸ್ಥಿತಗೊಳಿಸುತ್ತದೆ, ದಕ್ಷತೆಯನ್ನು ಸುಧಾರಿಸುತ್ತದೆ ಮತ್ತು ಪ್ರಕರಣಗಳನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ವಿಲೇವಾರಿ ಮಾಡುವುದನ್ನು ಖಚಿತಪಡಿಸುತ್ತದೆ.

**5. ನ್ಯಾಯಕ್ಕೆ ಪ್ರವೇಶ:** AI ಯ ಶಕ್ತಿಯನ್ನು ಬಳಸಿಕೊಂಡು ಚಾಟ್‌ಬಾಟ್‌ಗಳು ಮತ್ತು ವರ್ಚುವಲ್ ಸಹಾಯಕರು ವಕೀಲರಿಗೆ ಪ್ರವೇಶವನ್ನು ಹೊಂದಿರದ ವ್ಯಕ್ತಿಗಳಿಗೆ ಕಾನೂನು ಮಾರ್ಗದರ್ಶನ ಮತ್ತು ಮಾಹಿತಿಯನ್ನು ಒದಗಿಸಬಹುದು ಈ ಉಪಕರಣಗಳು ಸಾಮಾನ್ಯ ಕಾನೂನು ಪ್ರಶ್ನೆಗಳಿಗೆ ಉತ್ತರಿಸಲು ಸಹಾಯ ಮಾಡುತ್ತದೆ, ಒಟ್ಟಾರೆ ಪ್ರವೇಶವನ್ನು ಸುಧಾರಿಸಲು ಕಾನೂನು ಕಾರ್ಯವಿಧಾನಗಳನ್ನು ವಿವರಿಸುತ್ತದೆ ಕಡಿಮೆ ಜನಸಂಖ್ಯೆಗೆ ನ್ಯಾಯಕ್ಕಾಗಿ.

**6. ನ್ಯಾಯಾಂಗದ ದಕ್ಷತೆಯನ್ನು ಸುಧಾರಿಸಲು:** ನ್ಯಾಯಾಧೀಶರು ವಿಚಾರಣೆಗಳನ್ನು ತ್ವರಿತವಾಗಿ ನಡೆಸಲು ಮತ್ತು ಹೆಚ್ಚು



ಬೆಳ್ಳುಡಿ 25ನೇ ನವೆಂಬರ್ 2023

ಕೃತಕ ಬುದ್ಧಿಮತ್ತೆಯ ನ್ಯಾಯಾಧೀಶರುಗಳು!!

ಪರಿಣಾಮಕಾರಿಯಾಗಿ ಪ್ರಕರಣಗಳ ಉದ್ದವನ್ನು ಕಡಿಮೆ ಮಾಡಲು ಸಹಾಯ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಇದು ವಕೀಲರು ಗುಣಮಟ್ಟದ ಕಾನೂನು ತಾರ್ಕಿಕತೆ, ಕಾನೂನು ವಾದಗಳು ಮತ್ತು ಕಾನೂನು ವ್ಯಾಖ್ಯಾನದಲ್ಲಿ ಹೆಚ್ಚಿನ ಸಮಯವನ್ನು ಕಳೆಯಲು ಸಹಾಯ ಮಾಡುತ್ತದೆ.

**7. ನ್ಯಾಯಾಂಗ ವಿಮರ್ಶೆಯನ್ನು ರಚಿಸುವುದು:** ಒಮ್ಮೆ ಅಪ್ಲಿಕೇಶನ್ ದೊಡ್ಡ ಐತಿಹಾಸಿಕ ಭೂತಕಾಲದಲ್ಲಿ "ತರಬೇತಿ" ಪಡೆದ ನಂತರ, ಅಪ್ಲಿಕೇಶನ್ ನಿರ್ದಿಷ್ಟ ಒಪ್ಪಂದದ ಬಗ್ಗೆ ಪ್ರಮುಖ ಅಂಶಗಳನ್ನು ಹೈಲೈಟ್ ಮಾಡಲು ಸಾಧ್ಯವಾಗುತ್ತದೆ. ಸಾವಿರಾರು ವರ್ಷಗಳ ಹಿಂದಿನ ಮಾಹಿತಿಯ ಮೂಲಕ 'ನ್ಯಾಯಾಧೀಶರ ವಿಮರ್ಶೆ' ರಚಿಸಲು ಇದು ಸಹಾಯ ಮಾಡುತ್ತದೆ.

ನ್ಯಾಯಾಂಗ ಪ್ರಕ್ರಿಯೆಯಲ್ಲಿ AI ಯ ಅನಾನುಕೂಲಗಳು

**1. ನೈತಿಕ ಸಮಸ್ಯೆಗಳು:** ನ್ಯಾಯಾಂಗ ಪ್ರಕ್ರಿಯೆಯಲ್ಲಿ AI ಬಳಕೆಯು ನೈತಿಕ ಪರಿಗಣನೆಗಳನ್ನು ಹುಟ್ಟುಹಾಕುತ್ತದೆ. AI ಅಲ್ಗಾರಿದಮ್‌ಗಳು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ನ್ಯಾಯ ಸಮ್ಮತತೆಯನ್ನು ಖಚಿತಪಡಿಸಿಕೊಳ್ಳಬೇಕು. ತಪ್ಪಾದ ಫಲಿತಾಂಶಗಳು ಅಥವಾ ಅಸ್ತಿತ್ವದಲ್ಲಿರುವ ಪಕ್ಷಪಾತಗಳ ನಿರಂತರತೆಯನ್ನು ತಡೆಗಟ್ಟಲು ಡೇಟಾ ಅಥವಾ ಅಲ್ಗಾರಿದಮ್‌ಗಳಲ್ಲಿನ ಪಕ್ಷಪಾತ ಮತ್ತು ಪಕ್ಷಪಾತದ ಸಂಭಾವ್ಯತೆಯನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು.

**2. ಮಾನವ ತೀರ್ಪಿನ ಕೊರತೆ:** AI ಕಾನೂನು ಪ್ರಕ್ರಿಯೆಗಳಿಗೆ ಸಹಾಯ ಮಾಡುತ್ತದೆ; ಇದು ಮಾನವ ನ್ಯಾಯಾಧೀಶರ ವಿಮರ್ಶಾತ್ಮಕ ಚಿಂತನೆ, ವ್ಯಾಖ್ಯಾನ ಮತ್ತು ಒಳನೋಟವನ್ನು ಬದಲಿಸಲು ಸಾಧ್ಯವಿಲ್ಲ. ವಿಶಿಷ್ಟ ಸಂದರ್ಭಗಳನ್ನು ಪರಿಗಣಿಸುವಲ್ಲಿ, ಕಾನೂನನ್ನು ಅರ್ಥೈಸುವಲ್ಲಿ ಮತ್ತು ಪ್ರತಿ ಪ್ರಕರಣದಲ್ಲಿ ನ್ಯಾಯವನ್ನು ನಿರ್ವಹಿಸುವಲ್ಲಿ ಮಾನವ ತೀರ್ಪು ನಿರ್ಣಾಯಕವಾಗಿದೆ. AI ಮೇಲಿನ ಅತಿಯಾದ ಅವಲಂಬನೆಯು ಮಾನವ ನಿರ್ಧಾರ-ತೆಗೆದುಕೊಳ್ಳುವಿಕೆಯ ಪ್ರಾಮುಖ್ಯತೆ ಮತ್ತು ಅಂತರ್ಗತ ನಮ್ಯತೆಯನ್ನು ದುರ್ಬಲಗೊಳಿಸಬಹುದು.

**3. ತಾಂತ್ರಿಕ ಮಿತಿಗಳು:** AI ಡೇಟಾದ ಗುಣಮಟ್ಟ ಮತ್ತು ಲಭ್ಯತೆಯ ಮೇಲೆ ಅವಲಂಬಿತವಾಗಿದೆ. ಕಾನೂನಿನಲ್ಲಿ, ಸಂಪೂರ್ಣ ಮತ್ತು ನಿಖರವಾದ ಮಾಹಿತಿಯು ಯಾವಾಗಲೂ ಸುಲಭವಾಗಿ ಲಭ್ಯವಿರುವುದಿಲ್ಲ. ಸೀಮಿತ ಅಥವಾ ಪಕ್ಷಪಾತದ ಡೇಟಾವು ಪರಿಣಾಮಕಾರಿ ಮತ್ತು ವಿಶ್ವಾಸಾರ್ಹ AI ಅಲ್ಗಾರಿದಮ್‌ಗಳಿಗೆ ಅಡ್ಡಿಯಾಗಬಹುದು. ಹೆಚ್ಚುವರಿಯಾಗಿ, AI ವ್ಯವಸ್ಥೆಗಳು ಸಂಕೀರ್ಣ ಕಾನೂನು ತಾರ್ಕಿಕತೆ ಮತ್ತು ಸೂಕ್ಷ್ಮ ವ್ಯತ್ಯಾಸಗಳೊಂದಿಗೆ ಹೋರಾಡಬಹುದು, ಕಾನೂನು ಸಮಸ್ಯೆಗಳನ್ನು ನಿಖರವಾಗಿ ವಿಶ್ಲೇಷಿಸುವಲ್ಲಿ ಸವಾಲುಗಳನ್ನು ಸೃಷ್ಟಿಸುತ್ತವೆ.

**4. ಕಾನೂನು ಮತ್ತು ನಿಯಂತ್ರಕ ಸವಾಲುಗಳು:** ನ್ಯಾಯಾಂಗ ಪ್ರಕ್ರಿಯೆಯಲ್ಲಿ AI ಅನ್ನು ಸಂಯೋಜಿಸಲು ಕಾನೂನು ಮತ್ತು ನಿಯಂತ್ರಕ ಚೌಕಟ್ಟುಗಳನ್ನು ಎಚ್ಚರಿಕೆಯಿಂದ ಪರಿಗಣಿಸುವ ಅಗತ್ಯವಿದೆ. AI ತಂತ್ರಜ್ಞಾನದ ಬಳಕೆಯು ಹೊಣೆಗಾರಿಕೆ, ಹೊಣೆಗಾರಿಕೆ, ಡೇಟಾ ಗೌಪ್ಯತೆ ಮತ್ತು ಭದ್ರತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಸಾರ್ವಜನಿಕ ವಿಶ್ವಾಸವನ್ನು ನಿರ್ಮಿಸಲು ಮತ್ತು ನ್ಯಾಯಾಂಗ ವ್ಯವಸ್ಥೆಯ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಕಾನೂನು ಮತ್ತು ನೈತಿಕ ಮಾನದಂಡಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯ.

ಕೃತಕ ಬುದ್ಧಿಮತ್ತೆಯ ಪರಿಚಯವು ವಕೀಲರನ್ನು ಬದಲಿಸುತ್ತದೆಯೇ ಅಥವಾ ಇಲ್ಲವೇ?

ಸತ್ಯವೆಂದರೆ, ಕೃತಕ ಬುದ್ಧಿಮತ್ತೆಯ ಪರಿಚಯವು ವಕೀಲರನ್ನು ಬದಲಿಸುವುದಿಲ್ಲ ಆದರೆ ಅವರ ಸಮಗ್ರತೆ ಮತ್ತು ವಿಶ್ಲೇಷಣಾತ್ಮಕ ನಿಖರತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಮತ್ತು ಅವರ ಕೆಲಸದ ಹೊರೆ ಕಡಿಮೆ ಮಾಡುತ್ತದೆ ಮತ್ತು ಅವರಿಗೆ ಹೊಸ ಅವಕಾಶಗಳನ್ನು ಒದಗಿಸುವುದರ ಜೊತೆಗೆ ಅವರು ಹುಡುಕುತ್ತಿರುವ ಫಲಿತಾಂಶ-ಆಧಾರಿತ ದೃಷ್ಟಿಕೋನವನ್ನು ಅವರಿಗೆ ನೀಡುತ್ತದೆ. ಇದು ಅವರ ಕೆಲಸವನ್ನು ಉಳಿಸುತ್ತದೆ ಎಂಬ ದೊಡ್ಡ ತಪ್ಪು ಕಲ್ಪನೆಯಾಗಿದೆ, ಆದರೆ ಖಂಡಿತವಾಗಿಯೂ ಇದು ಅಸಾಧ್ಯ ಏಕೆಂದರೆ ಯಂತ್ರವು ಸಂಶೋಧನೆ ಮಾಡಬಹುದಾದರೂ, ಅದು ಅವರ ಕಕ್ಷಿದಾರರ ಮುಂದೆ ಅಥವಾ ನ್ಯಾಯಾಲಯದಲ್ಲಿ ವಕೀಲರಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದು ನಮ್ಮ ಮುಖ್ಯ ನ್ಯಾಯಮೂರ್ತಿ ಕೃತಕ ಬುದ್ಧಿಮತ್ತೆ ಸಹಾಯ ಮಾಡುತ್ತದೆ ಎಂದು ಹೇಳಿದರು. ವಕೀಲರು ಮತ್ತು ನ್ಯಾಯಾಧೀಶರು. ನ್ಯಾಯದ ತ್ವರಿತ ವಿತರಣೆಯಲ್ಲಿ ಇದು ಅಷ್ಟೇನೂ ಅವರನ್ನು ಬದಲಾಯಿಸುವುದಿಲ್ಲ.

**ಕೊನೆಯದಾಗಿ:** ವೃತ್ತಿಪರರ ದೈಹಿಕ ಶ್ರಮವನ್ನು ಬದಲಿಸಲು ಕೃತಕ ಬುದ್ಧಿಮತ್ತೆ ಇದೆ ಮತ್ತು ನ್ಯಾಯಾಲಯದ ಮುಂದೆ ವಕೀಲರ ಪಾತ್ರವು ಏಕೈಕ ಕಾರ್ಯಸಾಧ್ಯವಾದ ಆಯ್ಕೆಯಾಗಿದೆ. ಪ್ರಸ್ತುತ, ಇದನ್ನು ಕಾನೂನಿನಲ್ಲಿ ಅಳವಡಿಸಲಾಗಿರುವ ಅನೇಕ ಸ್ಥಳಗಳಿವೆ. ಅದರ ಏಕೀಕರಣವನ್ನು ರಕ್ಷಿಸುವ ಮೂಲಕ ಸುಲಭವಾಗಿ ಮಾಡಬಹುದಾದ ಕೆಲವು ಸವಾಲುಗಳನ್ನು ಸಹ ಹೊಂದಿದೆ. ಕೃತಕ ಬುದ್ಧಿಮತ್ತೆಯ ಯಶಸ್ವಿ ಅನುಷ್ಠಾನಕ್ಕೆ ಸಮತೋಲಿತ ವಿಧಾನದ ಅಗತ್ಯವಿರುತ್ತದೆ. ದತ್ತಾಂಶವನ್ನು ನಿರ್ವಹಿಸುವಾಗ, ಹಿಂಪಡೆಯುವಾಗ ಮತ್ತು ಬಳಸುವಾಗ ಕೃತಕ ಬುದ್ಧಿಮತ್ತೆ ಬಳಕೆದಾರರಿಗೆ ಡೇಟಾ ರಕ್ಷಣೆ ನಿಯಮಗಳ ಅಗತ್ಯವಿದೆ. ಕೃತಕ ಬುದ್ಧಿಮತ್ತೆಯು ಕಾನೂನಿನಲ್ಲಿ ಅನೇಕ ಪ್ರಯೋಜನಗಳನ್ನು ಹೊಂದಿದೆ ಎಂದು ಹೇಳಬಹುದು. ಕಾರಣ ಶ್ರದ್ಧೆ, ಡೇಟಾ ಸಂಗ್ರಹಣೆ ಮತ್ತು ವಿಶ್ಲೇಷಣೆಯಂತಹ ಅನೇಕ ಕಾರ್ಯಗಳಲ್ಲಿ ಕಾನೂನು ಸಂಸ್ಥೆಗಳಿಗೆ ಇದು ತುಂಬಾ ಉಪಯುಕ್ತವಾಗಿದೆ. ಇದು ಹೆಚ್ಚಿನ ಪ್ರಯೋಜನವನ್ನು ಹೊಂದಿದೆ, ಅದಕ್ಕಾಗಿಯೇ ಹೆಚ್ಚಿನ ಪ್ರಮಾಣದ ಹೂಡಿಕೆಯು ಕಾನೂನು ವೃತ್ತಿಪರರಿಂದ ಪಡೆದ ಪ್ರಯೋಜನಗಳಿಂದ ತುಂಬಿರುತ್ತದೆ.

ದತ್ತಾಂಶವನ್ನು ನಿರ್ವಹಿಸುವಾಗ, ಹಿಂಪಡೆಯುವಾಗ ಮತ್ತು ಬಳಸುವಾಗ ಕೃತಕ ಬುದ್ಧಿಮತ್ತೆ ಬಳಕೆದಾರರಿಗೆ ಡೇಟಾ ರಕ್ಷಣೆ ನಿಯಮಗಳ ಅಗತ್ಯವಿದೆ. ಕೃತಕ ಬುದ್ಧಿಮತ್ತೆಯು ಕಾನೂನಿನಲ್ಲಿ ಅನೇಕ ಪ್ರಯೋಜನಗಳನ್ನು ಹೊಂದಿದೆ ಎಂದು ಹೇಳಬಹುದು. ಕಾರಣ ಶ್ರದ್ಧೆ, ಡೇಟಾ ಸಂಗ್ರಹಣೆ ಮತ್ತು ವಿಶ್ಲೇಷಣೆಯಂತಹ ಅನೇಕ ಕಾರ್ಯಗಳಲ್ಲಿ ಕಾನೂನು ಸಂಸ್ಥೆಗಳಿಗೆ ಇದು ತುಂಬಾ ಉಪಯುಕ್ತವಾಗಿದೆ. ಇದು ಹೆಚ್ಚಿನ ಪ್ರಯೋಜನವನ್ನು ಹೊಂದಿದೆ, ಅದಕ್ಕಾಗಿಯೇ ಹೆಚ್ಚಿನ ಪ್ರಮಾಣದ ಹೂಡಿಕೆಯು ಕಾನೂನು ವೃತ್ತಿಪರರಿಂದ ಪಡೆದ ಪ್ರಯೋಜನಗಳಿಂದ ತುಂಬಿರುತ್ತದೆ.

# ಇನ್ನಾದರೂ ಮಹಿಳೆ ಮಹನೀಯಳು ಎನ್ನೋಣ

✍ ರಕ್ಷಿತಾ .ಎಂ
5ನೇ ಸೆಮಿಸ್ಟರ್ ಬಿ.ಎ.ಎಲ್.ಎಲ್.ಬಿ



"ಬೆಳವಣಿಗೆಗೆ ಅವಕಾಶಗಳ ಕೊಡಬೇಕೆ ಹೊರತು ಅವಶ್ಯಕತೆಗಳನ್ನಲ್ಲ". ಹೆಣ್ಣು ಎಂಬ ಎರಡಕ್ಷರದಲ್ಲೇ ಬಹಳ ಶಕ್ತಿ ಅಡಗಿದೆ. ಮಗಳಾಗಿ, ತಂಗಿಯಾಗಿ, ಗೆಳತಿಯಾಗಿ, ಮನೆಯ ಬೆಳಗುವ ಸೊಸೆಯಾಗಿ, ಸಂಸಾರದ ಸಾಗರ ದಾಟಲು ಸಂಗಾತಿಯಾಗಿ, ಜೀವ– ಜೀವನ ಎಲ್ಲವನ್ನೂ ಕೊಡುವ ತಾಯಿಯಾಗಿ ಎಲ್ಲಾ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಬಲ್ಲ ಶಕ್ತಿ ಇರುವವಳೇ ಸ್ತ್ರೀ, ಇವಳಿಗೆ 'ಅಬಲೆ' ಎಂಬ ಪಟ್ಟವೇಕೆ?

ಪುರಾತನ ಕಾಲದಿಂದಲೂ ಹೆಣ್ಣಿಗೆ ಅಪಾರವಾದ ಗೌರವ; ಅವಳ ಶಕ್ತಿಗೆ ಎಲ್ಲರೂ ತಲೆಬಾಗಿದ್ದಾರೆ. ದೇವಿಯನ್ನು ಪೂಜಿಸುವ ದೇಶದಲ್ಲಿ ಮಹಿಳೆಯರನ್ನು ಗೌರವಿಸದ ಕೆಲವರಿದ್ದಾರೆ, ಇನ್ನೂ ಕೆಲವು ಮನೆಗಳಲ್ಲಿ ಮತ್ತು ಸಮಾಜಗಳಲ್ಲಿ ಮಹಿಳೆಯರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಇಂದಿನ ಕಾಲದ ಮಹಿಳೆಯರು ಮೊದಲಿಗಿಂತ ಹೆಚ್ಚು ಜಾಗೃತ ಮತ್ತು ಬುದ್ಧಿವಂತರಾಗಿದ್ದಾರೆ. ಹೆಣ್ಣನ್ನು ದುರ್ಬಲರೆಂದು ಪರಿಗಣಿಸುವವರೇ ಮೂರ್ಖರು. ಈಗ ಪುರುಷರು ಕೂಡ ಹೆಣ್ಣಿನ ಚಿಂತನೆ ಮತ್ತು ಅವರ ವಿಚಾರಧಾರೆಗಳನ್ನು ಗೌರವಿಸುತ್ತಾರೆ. ಗೌರವಿಸಬೇಕಾದ್ದೇ. ಮಹಿಳೆಯರಿಗೆ ಹೋರಾಡುವ ಶಕ್ತಿ ಅಪಾರ. ಇಂದಿನ ಮಹಿಳೆ ಸದೃಢಳಾಗಿದ್ದಾಳೆ ಮತ್ತು ಅವಳ ಕಣ್ಣುಗಳಲ್ಲಿ ಅನೇಕ ಕನಸುಗಳಿವೆ. ಇಂದಿನ ಮಹಿಳೆ ವಿದ್ಯಾವಂತಳಾಗಿದ್ದು ಇಂದಿನ ಅನಿಷ್ಟ ಪದ್ಧತಿಯನ್ನು ಎದುರಿಸಿ ಹೊರಬಂದಿದ್ದಾಳೆ. ಇಂದು ಮಹಿಳೆ, ವೈದ್ಯೆ ಇಂಜಿನಿಯರ್ ಲಾಯರ್ ಮತ್ತು ಶಿಕ್ಷಕಿ ಪೈಲೆಟ್ ಎಲ್ಲ ಕ್ಷೇತ್ರದಲ್ಲೂ ಗುರುತಿಸಿಕೊಂಡಿದ್ದಾಳೆ. ಹೆಣ್ಣು ಯಾವುದೇ ವಿಷಯದಲ್ಲಿ ಪುರುಷನಿಗಿಂತ ದುರ್ಬಲಳೂ ಅಲ್ಲ, ಕಡಿಮೆಯೂ ಅಲ್ಲ.

ಮಹಿಳಾ ಮೀಸಲಾತಿಯನ್ನು ಪಂಚಾಯಿತಿಯಲ್ಲಿ ಸಹ ಸಂವಿಧಾನದ ವಿಧಿ 243 ಡಿ ಅಡಿಯಲ್ಲಿ ಘೋಷಿಸಿದ್ದಾರೆ. 108ನೇ ತಿದ್ದುಪಡಿಯ ಅಡಿಯಲ್ಲಿ ಮಹಿಳೆಯರಿಗೆ ಲೋಕಸಭಾ ಚುನಾವಣೆ ಹಾಗೂ ರಾಜ್ಯ ವಿಧಾನ ಸಭೆಯಲ್ಲಿ 1/3 ಮೀಸಲಾತಿಯನ್ನು ಘೋಷಿಸಿದ್ದಾರೆ. ಇದರಿಂದ ಹೆಣ್ಣಿಗೆ ಅವಳ ಕನಸುಗಳನ್ನು ನೆರವೇರಿಸಲು ಅವಕಾಶಗಳು ಸಿಕ್ಕಿದಂತಾಗಿದೆ.

ಇತ್ತೀಚೆಗೆ ನೀಡಿರುವ ಸ್ತ್ರೀ ಶಕ್ತಿ ಯೋಜನೆ, ಗೃಹಲಕ್ಷ್ಮಿ, ಅನ್ನಭಾಗ್ಯ ಮತ್ತಿತರೆ ಯೋಜನೆಗಳು ಅವಕಾಶಗಳನ್ನು ನೀಡುತ್ತಿಲ್ಲ ಎಂದೇನಲ್ಲವಾದರೂ, ಅವಶ್ಯಕತೆಗಳನ್ನು ಪೂರೈಸುತ್ತಿದೆ. ನೆನಪಿನಲ್ಲಿಡಬೇಕಾದ್ದು ಏನೆಂದರೆ ಮನುಷ್ಯನಿಗೆ ಎಲ್ಲವನ್ನು ಪೂರೈಸುತ್ತಾ ಬಂದರೆ ಅವನು ದುಡಿಯುದನ್ನೇ ಮರೆತುಬಿಡುತ್ತಾನೆ. ಅವನ ಆಸೆ–ಆಕಾಂಕ್ಷೆಗಳನ್ನು ಪೂರೈಸಲು ಸರ್ಕಾರವು ಮೆಟ್ಟಿಲನ್ನು ನೀಡಬೇಕೆ ಹೊರತು ಹಾಸಿಗೆ ನೀಡಿ ಬೆಚ್ಚಗಿಟ್ಟರೆ ಸದಾ ನಿದ್ರಿಸುತ್ತಲೇ ಇದ್ದುಬಿಡುತ್ತಾನೆ. ಸ್ತ್ರೀಶಕ್ತಿ ಯೋಜನೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ವ್ಯವಸ್ಥೆ ನೀಡುವುದರ ಮೂಲಕ ಹೆಣ್ಣನ್ನು ಅಬಲೆ ಎಂದು ಘೋಷಿಸಿದಂತಾಗಿದೆ ಎಂಬುದು ನನ್ನ ಅನಿಸಿಕೆ. ಬಹುಶಃ ಇದರ ಅವಶ್ಯಕತೆ ಇರಲಿಲ್ಲ. ಬಸ್ಸಿನಲ್ಲಿ ಸಂಚಾರ ಕೇವಲ ಮಹಿಳೆಯರಷ್ಟೇ ಮಾಡುವುದಿಲ್ಲ. ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಕೆಲಸಕ್ಕೆ ಹೋಗುವವರು ಅಷ್ಟೇ ಅಲ್ಲದೆ ಹಿರಿಯ ನಾಗರಿಕರು ಎಲ್ಲರೂ ಇರುತ್ತಾರೆ. ಈ ಉಚಿತ ವ್ಯವಸ್ಥೆಯನ್ನು ಹಲವರು ದುರುಪಯೋಗಪಡಿಸಿಕೊಂಡವರೂ ಇದ್ದಾರೆ. ಹೆಣ್ಣು ಮಕ್ಕಳು ಹಿಂದೆ ವಿದ್ಯಾಭ್ಯಾಸದ ಕಡೆ ಗಮನಕೊಡದೆ ಹಾಗೂ ಅವರು ಪೋಷಕರ ಒತ್ತಾಯದ ಮೇರೆಗೆ ಮದುವೆಯಾಗಿ ಶಿಕ್ಷಣ ಮುಂದುವರಿಸಲಾಗದೆ ಬಹಳ ನೊಂದಿದ್ದರೆ ಅಂತ ಹೆಣ್ಣು ಮಕ್ಕಳು ಅವಳ ಮುಂದಿನ ಪೀಳಿಗೆಗೆ ನಾನು ಶಿಕ್ಷಣದ ಕಡೆ ಗಮನಕೊಡದೆ ಹೀಗಾದೆ, ನೀನು ಚೆನ್ನಾಗಿ ಓದಿ ಒಳ್ಳೆ ಹೆಸರು ತಗೊಂಡು ಎಲ್ಲರಿಗಿಂತ ಉತ್ತಮ ಸ್ಥಾನವನ್ನು ಪಡೆದು ಸಮಾಜದಲ್ಲಿ ಹೆಸರು ಮಾಡಬೇಕು ಅಂತ ಹೇಳುತ್ತಿ ರುತ್ತಾರೆ, ಈ ಕೆಲವು ಯೋಜನೆಗಳಿಂದ ಅವಳ ಮನಸ್ಸಿನಲ್ಲಿ ಹೆಣ್ಣಾಗಿ ಹುಟ್ಟಿದರೆ ಉಚಿತ ಬಸ್ ಇದೆ. ಪ್ರತಿ ತಿಂಗಳಿಗೆ 2000 ರೂಪಾಯಿಗಳು, 10 ಕೆಜಿ ಅಕ್ಕಿ ಬಿಪಿಎಲ್ ಕಾರ್ಡ್ ಇದ್ದವರೇ ಆದರೆ ದಿನಸಿ ಕೂಡ! ಎಲ್ಲಾ ದೊರೆತರೆ ದುಡಿಮೆಯ ಅವಶ್ಯಕತೆ ಏನಿದೆ? ಓದುವ ಹಂಬಲ ಎಂದಿಗೂ ಚಿಗುರೊಡೆಯುವುದಿಲ್ಲ! ಆದುದರಿಂದ ಹೆಣ್ಣನ್ನು ಅಬಲೆ ಎಂದು ಪರಿಗಣಿಸಿ ಅವಳಿಗೆ ಎಲ್ಲಾ ಸೌಲಭ್ಯವನ್ನು ಕೊಡುತ್ತಾ ಅವಳನ್ನು ನಿಜವಾದ ಅಬಲೆಯನ್ನಾಗಿ ಮಾಡುತ್ತಿದ್ದಾರೆ; ಅವಳ ಶಕ್ತಿಯನ್ನು ಕುಗ್ಗಿಸುತ್ತಿದ್ದಾರೆ ಎನ್ನಬಹುದಲ್ಲವೆ?

ಈ ಎಲ್ಲಾ ಪರದೆಗಳಿಂದ ಅವಳ ಶಕ್ತಿ ಅವಳಿಗೆ ಕಾಣಿಸುತ್ತಿಲ್ಲ. ವಿದ್ಯಾವಂತ ಮಹಿಳೆಯೇನು? ಯಾವ ಮಹಿಳೆಗಾದರೂ ತನ್ನ ಮನೆ ಮತ್ತು ವೃತ್ತಿಪರ ಜೀವನವನ್ನು ನಿಭಾಯಿಸುವ ಸಾಮರ್ಥ್ಯವಿರುತ್ತದೆ. ಪ್ರಾಣವೇ ಹೋಗುವಷ್ಟು ನೋವನ್ನು ಹೆರಿಗೆಯ ಸಮಯದಲ್ಲಿ ಅನುಭವಿಸುವ ತಾಯಿಗೆ ಇವೆಲ್ಲ ಒಂದು ಲೆಕ್ಕವೇ? ಭಾರತದ ದೇಶದ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರು. ಆದ್ದರಿಂದ ಭಾರತದ ಮಹಿಳೆಯರು ಶಿಕ್ಷಣ ಪಡೆಯುವುದು ಬಹಳ ಮುಖ್ಯ. ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಶೋಷಣೆಯಿಂದ ಪಾರಾಗಿ, ಅವರ ಸಂಪೂರ್ಣ ಅಭಿವೃದ್ಧಿಯಾಗಬೇಕಾದರೆ ಅವರಲ್ಲಿ ಬೌದ್ಧಿಕ ಶಕ್ತಿ ಜಾಗೃತವಾಗ ಬೇಕು. ದೇವಿಯಾಗಿ ಮಾತ್ರ ಸರಸ್ವತಿ ಎನ್ನುತ್ತೇವೆ; ಪಾರ್ವತಿ ಎನ್ನುತ್ತೇವೆ, ಶಕ್ತಿ ಎನ್ನುತ್ತೇವೆ. ಈಗ ಹೆಣ್ಣಿನ ಸಬಲೀಕರಣ ಅಂದರೆ ಎಂತಹ ವಿಪರ್ಯಾಸವಲ್ಲವೇ? ವಿದ್ಯಾವಂತ ಹೆಣ್ಣು ಮಕ್ಕಳು ತಮ್ಮ ಬುದ್ಧಿವಂತಿಕೆ ಮತ್ತು ವಿವೇಚನೆಯನ್ನು ಬಳಸಿ ತಮ್ಮ ಪರಿಸ್ಥಿತಿಯನ್ನು ತಾವಾಗಿಯೇ ನಿಭಾಯಿಸಿ ಆರ್ಥಿಕವಾಗಿ ಸಬಲರಾಗಿ ಗೌರವಯುತವಾಗಿ ಜೀವನ ನಡೆಸಬಹುದು.

ಅಷ್ಟಕ್ಕೂ ನಾವು ಈ ಮಹಿಳಾ ಸಬಲೀಕರಣ, ಸ್ತ್ರೀಶಕ್ತಿ ಇತ್ಯಾದಿಯಾಗಿ ಸ್ವಾತಂತ್ರ್ಯ ದೊರಕಿದಾಗಿನಿಂದಲೂ ಬಡಬಡಾಯಿಸುತ್ತಲೇ ಇದ್ದೀವಿ! ಈ ಆಧುನಿಕ ಯುಗದಲ್ಲಿ ನಾವಿನ್ನೂ ಇದರ ಕುರಿತು ಬರೆಯಬೇಕಾದ, ಮಾತನಾಡಬೇಕಾದ, ಚರ್ಚಿಸಬೇಕಾದ ಅವಶ್ಯಕತೆ ಉದ್ಭವವಾಗಿದೆಯೆಂದರೆ ಅದೆಂತಹ ನಾಚಿಕೆಗೇಡಿನ ಸಂಗತಿ ಅಲ್ಲವೆ. 'ಮಹಿಳೆಯ ಸಬಲೀಕರಣ ಆಗಿಲ್ಲ' ಎನ್ನುವುದೇ ವೈಯಕ್ತಿಕ ಸ್ತರದಿಂದ ಹಿಡಿದು ಸರ್ಕಾರದಲ್ಲಿ ನೀತಿಗಳನ್ನು ರೂಪಿಸುವ ಅಧಿಕಾರಿಗಳವರೆಗಿನ ಭಾವನೆ. ಇವೆಲ್ಲವೂ ದೇಶದ ಹೆಸರನ್ನು ಕುಗ್ಗಿಸುತ್ತಿವೆಯಷ್ಟೆ. ಮನುಜನಲ್ಲಿನ ಪಶುತ್ವ ಆಗಾಗ್ಗೆ ಮಹಿಳೆಯ ಮೇಲಿನ ದೌರ್ಜನ್ಯದ ರೂಪದಲ್ಲಿ ವ್ಯಕ್ತವಾಗುತ್ತಿರುವುದು ಎಂತಹ ಅವಮಾನದ ಸಂಗತಿ. ನಾರಿಯರು ಪೂಜಿಸಲ್ಪಡುವ ಕಡೆ ದೇವತೆಯರು ನೆಲೆಸುತ್ತಾರಂತೆ. ಈಗಾಗಲೆ ಈ ದೇಶದಲ್ಲಿ ನಡೆದ ಮಹಿಳೆಯರ ಮೇಲಿನ ಘೋರ ಅತ್ಯಾಚಾರಗಳಿಗೆ ಇನ್ನೂ ದೇವತೆಯರು ನೆಲೆಸಿದ್ದಾರೆ ಎಂದರೆ ಆಶ್ಚರ್ಯವೇ. ಇದು ನಿಲ್ಲಬೇಕಾಗಿದೆ. ಇನ್ನಾದರೂ ಮಹಿಳೆ ಮಹನೀಯಳು ಎನ್ನೋಣ.

**ಕಾಣು ನೀ ಮುಕ್ತವಾಗಿ ನಿನ್ನ ಕನಸನ್ನೆಲ್ಲಾ**
**ಹೆಜ್ಜೆ ಹಿಂದೆ ಇಡದಿರು ಹೆದರಿ ನೀ ಜಗಕೆಲ್ಲ;**
**ಮುಟ್ಟು ನೀ ನಿನ್ನ ಗುರಿಯನ್ನೆಲ್ಲ**
**ಓ ಹೆಣ್ಣೆ ನೀ ಅಬಲೆ ಅಲ್ಲ...!**







ಕಾಡು ಕುದುರೆ ಕಾಡು ಕುದುರೆ
ಓಡಿ ಓಡಿ ಹೊಂಟಿತ್ತ
ಓಡುವ ಅವಸರದಲ್ಲಿ
ಓಡುವವರ ನೋಡಿ
ಹಾರೋದ ಮರೆತಿತ್ತ

ಶರ್ಟ್ ಪ್ಯಾಂಟು ಹಾಕ್ಕೊಂಡು ಶಾನ್ಯ ಎಂದು ಬಾಳ ತಿಳಿದಿತ್ತ
ಕಣ್ಣಿಗೆ ಕಂಡ ಸಗಣಿ ತಿನ್ನಕ ಅವಸರ ಮಾಡಿತ್ತ

ಅಹಂ ಎಂಬ ಮೂಟೆ ಬೆನ್ನಮೇಲೆ ಇಟ್ಟುಕೊಂಡು ಹೊಂಡಿತ್ತ
ಭಾರ ಭಾರ ಎಂದು,
ಇನ್ನು ಒಂದು ಮೂಟೆ ಹಾಕ್ಕೊಂಡು ಹೊರಟು ಹೋಯ್ತು

ಓಡೋ ಕುದುರೆ ಪಂದ್ಯದಲ್ಲಿ ಎಲ್ಲವ ಮರೆತಿತ್ತ
ಕಂಡ ಕಂಡ ಕುದುರೆಗಳ ನೋಡಿ ಅಣಕಿಸಿ ಅಪಹಾಸ್ಯ ಮಾಡಿತ್ತ

ಸಾಲ ಸೂಲದಿ ಶೋಕಿ ಮಾಡುತ
ಸುಖದಿಂದ ವಾಲ್ಯಾಡಿ ಹೊಂಟಿತ್ತ
ಸಾಲದ ಬಡ್ಡಿ ಬೆನ್ನೇರಿದಾಗ
ನೆಮ್ಮದಿ ಮಾರೋಕೆ ಓಡೋಡಿ ಹೊಂಟಿತ್ತ

ಆಸೆ ಕುದುರೆಗೆ ಹುಚ್ಚು ಹಿಡಿದಿತ್ತ
ದುಡ್ಡಿನ ಮದದಾಗ ಎರಡು ಕೊಂಬು ಬಂದಿತ್ತ

ಈ ಜಗವೇ ಒಂದು ಸ್ಪರ್ಧೆ ಅಂತ ಅಂದುಕೊಂಡಿತ್ತ
ಮೂರ್ಖ ಕುದುರೆ
ಧರ್ಮ ಕರ್ಮವ ತುಳಿದಿತ್ತ
ಜೀವನದ ಮರ್ಮವ ಅರಿಯದೆ ಓಡಿತ್ತ

ಮುಕ್ಕಣ್ಣನಿಗೂ ಮೂಗುದಾರ ಸಿಗದೆ ಹೋಗಿತ್ತ

ಪಾಪದ ಕುದುರೆ...
ಸ್ಮಶಾನವ ಬಹಳ ಬೇಗ ತಲುಪಿತ್ತ
ಸ್ಮಶಾನವ ಬಹಳ ಬೇಗ ತಲುಪಿತ್ತ

ಮಂಜನಗೌಡ .ಎನ್.ಎಸ್
5ನೇ ಸೆಮಿಸ್ಟರ್ ಎಲ್ಎಲ್.ಬಿ

ಕನಸು ಕಾಣು
ನಿನ್ನ ನೀ ಮರೆತಲ್ಲ

ನನಸ ಮಾಡಿಕೋ
ಬದುಕ ತೋರದಲ್ಲ

ಕನಸಲ್ಲೇ ಕಳೆದ್ಹೋಗಬೇಡ
ಪ್ರಯತ್ನದಲ್ಲಿ ಬದುಕು

ಸ್ವಪ್ನಗಳಲ್ಲಿ ಮುಳುಗಿ
ಕರಗಿ ಆವಿಯಾಗಬೇಡ

ಕ್ಷಣಗಳ ಸುಖಕ್ಕಾಗಿ
ಕನಸ ಮಾರಬೇಡ..



ಕಲ್ಪವೃಕ್ಷದಂತೆ ಸ್ತ್ರೀ;
ಅವಳ ಪಾದದಲ್ಲೇ ಇರುವುದು ಧರೆ

ಕಲ್ಪನೆಗೂ ಮೀರಿದ ಅವಳ ಹೊಳಪು
ತ್ಯಾಗಿಯೂ ಅವಳೆ, ಸಹಾನುಭೂತಿ ಅವಳದ್ದೇ.

ತಾಯಿಯೋ, ಮಡದಿಯೋ, ಮಗಳೋ–
ಸಂಬಂಧಕ್ಕೂ ಮೀರಿದ ದೇವತೆ ಅವಳು!

ಜೀವಿಗಳ ಕುಲಕ್ಕೆ, ಜೀವನ ಕಲಿಸಿದ
ದೈವ ಅವಳು
ಕಾಣುವ ಲೋಕಕ್ಕೆ ಅದ್ಭುತ ಪ್ರಜ್ಞೆ
ತೋರುವಳು

ಈ ಬರದ ಭೂಮಿಗೆ
ದೇವತೆಯ ಮಳೆ ಸುರಿಯೆ
ನಿನ್ನ ಅಡಿಯಿಂದ ಉದ್ಭವಿಸುವೆ
ಓ ಎನ್ನ ನಾರಿಯೆ!